ಗ್ರ್ಯಾಂಟ್ ರೂಲ್ಸನ್ನು ತಿದ್ದುಪಡಿ ಮಾಡಬೇಕಾಗುತ್ತದೆ. Suppose I have to give it under land grant rules, the act have to be amended.

ಶ್ರೀ ಬಸವರಾಜ್.—ಮಾನ್ಯ ಅಧ್ಯಕ್ಷರೇ, ಈ ಐದು ಸೆಂಟ್ಸ್ ವರೆಗೆ ಜಾಗಗಳನ್ನು ಕೊಟ್ಟಿರುವುದು ಗ್ರಾಮಾಂತರ ಪ್ರದೇಶಗಳಲ್ಲಿ ಮಾತ್ರ. ಇದನ್ನು ಹೊಂದಿರುವವರಲ್ಲಿ: ಕೃಷಿ ಕಾರ್ಮಿಕರು, ಕಡು ಬಡವರು ಯಾರಿದ್ದಾರೆ, ಅವರು ಅರ್ಜಿಯನ್ನು ಸಲ್ಲಿಸಿ, ರೆವಿನ್ಯೂ ಇಲಾಖೆಯವರಿಂದ ಮನೆ ನಿವೇಶನವನ್ನು ಅಲಾಟ್ ಮಾಡಿಸಿಕೊಂಡಿದ್ದಾಗಿರುತ್ತದೆ. ಆಗ ಈ ಭೂಮಿಯನ್ನು ಉಚಿತವಾಗಿ ಕೊಟ್ಟಿದ್ದಾರೆಯೇ ಹೊರತು, ಅದಕ್ಕೆ ಹಣ ಕೊಡುವ ಪದ್ಧತಿಯು ಇಷ್ಟರವರೆಗೆ ಇರಲಿಲ್ಲ ಮಾನ್ಯ ಇದಿನಬ್ಬನವರು ಹೇಳಿದ ಹಾಗೆ, ಒಂದು ವರ್ಷದಿಂದೀಚೆಗೆ ಈ ಜಾಗದ ಬಗ್ಗೆ ಹಣ ವಸೂಲಿ ಮಾಡುವಂತಾದ್ದು ನಡೆಯುತ್ತಾ ಇದೆ. ಆದ್ದೊತ್ತು ಇದು ಉಚಿತವಾಗಿ ನೀಡಿದ ನಿವೇಶನ ; ಇದಕ್ಕೆ ಹಣ ತೆಗೆದುಕೊಳ್ಳಬಾರದು, ಎಂಬ ಆದೇಶವನ್ನು ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ.—ಅಧ್ಯಕ್ಷರೆ, ನಾನು ಈಗಾಗಲೇ ಸ್ಪಷ್ಟವಾಗಿ ಹೇಳಿದ್ದೇನೆ. ಲ್ಯಾಂಡ್ ಗ್ರ್ಯಾಂಟ್ ರೂಲ್ಸ್ ಪ್ರಕಾರ ಈ ನಿವೇಶನಗಳಿಗೆ ಹಣ ವಸೂಲಿ ಮಾಡಬೇಕಾಗುತ್ತದೆ. ಒಂದು ವೇಳೆ ಮಾನ್ಯ ಸದಸ್ಯರುಗಳ ಸೂಚನೆಯನ್ನು ಒಪ್ಪಿಕೊಳ್ಳಬೇಕಾದರೆ ಆ ಕಾನೂನಿಗೆ ತಿದ್ದುಪಡಿಯನ್ನು ತರಬೇಕಾಗುತ್ತದೆ. ಆದುದರಿಂದ ಆ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ಶ್ರೀ ಜಿ. ಎಸ್. ಆಚಾರ್.—ಅಧ್ಯಕ್ಷರೆ, ಈ ಕುರಿತು ನಮ್ಮ ಕಾಳಜಿ ಏನೆಂದರೆ, ಭೂರಹಿತರಿಗೆ ಮಾರುಕಟ್ಟೆ ಬೆಲೆಯಲ್ಲಿ ನಿವೇಶನವನ್ನು ವಿತರಣೆ ಮಾಡುವಾಗ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದೊಂದು ತಾಲ್ಲೂಕಿನಲ್ಲಿ ಒಂದೊಂದು ಬೆಲೆ ನಿರ್ಧರಿಸಿರುತ್ತಾರೆ. ಆದರೆ ನಿಜವಾಗಿಯೂ ಮಾರುಕಟ್ಟೆ ಬೆಲೆಯಲ್ಲಿ ವೈಪರೀತ್ಯ ಇರುವುದಿಲ್ಲ. ಇದು ಕೆಲವು ಗೊಂದಲಕ್ಕೆ ಕಾರಣವಾಗಿರುತ್ತವೆ. ಡಿ.ಸಿ.ಯವರೆಗೆ ನಾವು ಏನು ಅಧಿಕಾರವನ್ನು ಕೊಟ್ಟಿರುತ್ತೀರಿ, ಅದರ ಮೂಲಕ ರೆವಿನ್ಯೂ ಅಧಿಕಾರಿಗಳು ನಿರ್ಣಯ ಮಾಡುವಾಗ ತೊಂದರೆಯಾಗುತ್ತದೆ. ಎರಡನೇಯದಾಗಿ ಈ ಭೂಮಿಯನ್ನು ಭೂರಹಿತರಿಗೆ ಕೊಡಬೇಕೆಂದು ಹೇಳಿದ್ದೀರಿ. ಆದರೆ ಮಾನ್ಯ ಬಸವರಾಜ್ ಅವರ ಕ್ಷೇತ್ರದಲ್ಲಿ ಕಂದಾಯ ಇಲಾಖೆಯ ಅಧಿಕಾರಿಗಳಿಗೆ ಕಡುಬಡವರಿಗೆ ಕೊಡತಕ್ಕಂಥ ಬೆಲೆ ಯಾವುದಿದೆ, ಅದಕ್ಕಿಂತ ಕಡಿಮೆ ಬೆಲೆಯಲ್ಲಿ ಕೊಟ್ಟಿದ್ದಾರೆ. ಇಂಥ ಅವ್ಯವಹಾರ ಆಗಬಾರದು. ಯಾರು ಕಡು ಬಡವರಿದ್ದಾರೆ ಅವರಿಗೆ ಮಾತ್ರ ಇಂಥ ಭೂಮಿ ಸಿಗುವ ಹಾಗೆ ವ್ಯವಸ್ಥೆ ಮಾಡಬೇಕು.

ಶ್ರೀ ಆರ್. ವಿ. ದೇಶಪಾಂಡೆ.—ಅಧ್ಯಕ್ಷರೇ, ನಾನು ಯಾರು ಕೇಳಿದರೂ ಕೂಡ ಇದೇ ಉತ್ತರವನ್ನು ಕೊಡಬೇಕಾಗುತ್ತದೆ. ಕಡು ಬಡವರಿಗೆ ಉಚಿತವಾಗಿ ನಿವೇಶನವನ್ನು ಕೊಡುವಂಥ ಮನಸ್ಸು ನನಗೂ ಕೂಡ ಇದೆ. ಆದರೆ ಆ ಬಗ್ಗೆ ಲ್ಯಾಂಡ್ ಗ್ರ್ಯಾಂಟ್ ರೂಲ್ಸ್‌ಗೆ ಅಮೆಂಡ್‌ಮೆಂಟ್ ತರಬೇಕಾಗುತ್ತದೆ, ಆದರ ಬಗ್ಗೆ ಸರಕಾರ ಪರಿಶೀಲನೆ ಮಾಡುತ್ತದೆ.

ಶ್ರೀ ಬಿ. ಎ. ಉಮರಬ್ಬ.—ಹಾಗಾದರೆ ತಾವುಗಳು ದಕ್ಷಿಣ ಕನ್ನಡ ಜಿಲ್ಲೆಯ ಶಾಸಕರುಗಳ ಒಂದು ಮೀಟಿಂಗ್ ಕರೆದು ಇರುವ ಸಮಸ್ಯೆಗಳ ಬಗ್ಗೆ ಚರ್ಚಿಸಿ ಒಂದು ನಿರ್ಣಯಕ್ಕೆ ಬರುವ ವ್ಯವಸ್ಥೆಯನ್ನು ಮಾಡಿ.

ಅಧ್ಯಕ್ಷರು.—ಮಾನ್ಯ ಸದಸ್ಯರು ಹೇಳಿದ ಹಾಗೆ ಒಂದು ಮೀಟಿಂಗ್ ಕರೆದು, ಆ ಬಗ್ಗೆ ವಿವರವಾದ ಚರ್ಚೆ ಮಾಡಿ ಪರಿಶೀಲನೆ ಮಾಡಿ,

ಶ್ರೀ ಆರ್. ವಿ. ದೇಶಪಾಂಡೆ.—ಆಯಿತು. ಹಾಗೆಯೇ ಮಾಡುತ್ತೇನೆ.

೨) ಮಂಗಳೂರು ಹಳೆ ಬಂದರಿನ ಯೋಜನೆ ಮತ್ತು ಇನ್ನಿತರ ಮೀನುಗಾರಿಕಾ ಬಂದರುಗಳ ಅಭಿವೃದ್ಧಿ ಕುರಿತು.

ಶ್ರೀ ಎಂ. ವೀರಪ್ಪಮೊಯ್ಲಿ.—ಸನ್ಮಾನ್ಯ ಅಧ್ಯಕ್ಷರೇ, ಮಂಗಳೂರು ಹಳೆ ಬಂದರಿನ ಯೋಜನೆ ಮತ್ತು ಇನ್ನಿತರ ಮೀನುಗಾರಿಕೆ ಬಂದರುಗಳ ಅಭಿವೃದ್ಧಿ ಬಗ್ಗೆ ತೋರಿಸಿದ ನಿರ್ಲಕ್ಷ್ಯತನದಿಂದ ಅನೇಕ ಮೀನುಗಾರಿಕೆ ದೋಣಿಗಳು ಮುಳುಗಿದ್ದು ಪ್ರಾಣ ಹಾನಿ ಮತ್ತು ಆಸ್ತಿಗೆ ಉಂಟಾಗಿರುವ ನಷ್ಟದ ಬಗ್ಗೆ

ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ — ಮಾನ್ಯ ಅಧ್ಯಕ್ಷರೇ, ನಾನು ಹೇಳಿಕೆ ಕೊಡುವುದಕ್ಕೆ ಮುಂಚೆ ಒಂದು ಮಾತನ್ನು ಹೇಳಲು ಇಚ್ಛಿಪಡುತ್ತೇನೆ. ನಾನು ಸಭೆಗೆ ಸಕಾಲದಲ್ಲಿ ಬರಲಿಕ್ಕೆ ಆಗಲಿಲ್ಲ ತಡವಾಯಿತು. ಇಂದು ಪ್ರಶ್ನೋತ್ತರ ಇದೆ ಎಂದು ನಾನು ಅಂದುಕೊಂಡಿದ್ದೆ. ಸಭಾಧ್ಯಕ್ಷರಿಗೆ ದೂರವಾಣಿ ಮಾಡಿ ಇವತ್ತು ಉಳಿದಿರುವ ಕೆಲವು ವಿಷಯಗಳನ್ನು ಮುಂಗಿಸೋಣವೆಂದು ರಿಕ್ವೆಸ್ಟ್ ಮಾಡಿದ್ದೆ. ಇವತ್ತಿನ ಅಜೆಂಡಾವನ್ನು ನಾನು ನೋಡಲಿಲ್ಲ. I must express my regrets. I do not want to show disrespect to this House. ಇಷ್ಟನ್ನು ಹೇಳಿ ನನ್ನ ಹೇಳಿಕೆಯನ್ನು ಕೊಡಬಯಸುತ್ತೇನೆ.

ರಾಜ್ಯದಲ್ಲಿ ವಿಮಾನುಗಾರಿಕಾ ಬಂದರುಗಳಾದ ಮಲ್ಪೆ, ಮಂಗಳೂರು, ಹೊನ್ನಾವರ ಮತ್ತು ತದಡಿ ಇವುಗಳನ್ನು ಅಭಿವೃದ್ಧಿಪಡಿಸಲು ಕ್ರಮ ತೆಗೆದುಕೊಳ್ಳಲಾಗಿದೆ. ಮಲ್ಪೆ ಬಂದರಿಗೆ, ಇದುವರೆಗೆ ೪೭೨ ಲಕ್ಷ ರೂ. ವಿಚ್ರ್ಯಾಗಿದ್ದು, ಬೇಸಿನ್‌ನಲ್ಲಿ ಹೂಳೆತ್ತುವ ಕೆಲಸ ನಡೆದಿದ್ದು, ಸ್ಲಿಪ್‌ವೇ ಯಂತ್ರವನ್ನು ಜೋಡಿಸಬೇಕಾಗಿದೆ. ಹೊನ್ನಾವರ ಬಂದರಿನ ಕಾಮಗಾರಿ ಕೆಲಸಗಳನ್ನು ರೂ. ೬೯ ಲಕ್ಷಗಳಲ್ಲಿ ಪೂರ್ಣಗೊಳಿಸಲಾಗಿದೆ. ಮಂಗಳೂರಿನ ಹಳೆ ಬಂದರಿನ ಅಭಿವೃದ್ಧಿಗಾಗಿ, ರೂ. ೯೯.೫೫ ಲಕ್ಷಗಳು ಮಂಜೂರಾಗಿದ್ದು ಈ ಪೈಕಿ ೪೬.೫೪ ಲಕ್ಷ ರೂ.ಗಳಂ ವಿಚ್ರ್ಯಾಗಿ ಬಾರ್ಜ್ ಕೆಲಸ ಪೂರ್ಣಗೊಂಡಿದೆ. ಇನ್ನಿತರ ಕೆಲಸಗಳು ಮುಂದುವರಿಯಬೇಕಾದರೆ, ಹೂಳೆತ್ತುವ ಕೆಲಸ ಆಗಬೇಕಾಗಿದೆ. ತದಡಿ ಬಂದರು, ನಿರ್ಮಾಣ ಕಾರ್ಯವನ್ನು ಭಾರತ ಡೆನ್ಮಾರ್ಕ್ ಯೋಜನೆಯಲ್ಲಿ ೧೯೪ ಲಕ್ಷ ರೂ. ವೆಚ್ಚದಲ್ಲಿ ತೆಗೆದುಕೊಂಡಿದ್ದು, ಹೂಳೆತ್ತುವ ಕೆಲಸ ಹಾಗೂ ಗ್ರೋಯಾನ್ ಕೆಲಸವನ್ನು ಹೊರತು ಬೇರೆಲ್ಲಾ ಕೆಲಸಗಳು ಮುಕ್ತಾಯ ಹಂತದಲ್ಲಿವೆ.

ಸರ್ಕಾರದ ಅನುದಾನದ ಇತಿ ಮಿತಿಯಲ್ಲಿ ವಿಮಾನುಗಾರಿಕೆ ಬಂದರುಗಳ ಅಭಿವೃದ್ಧಿ ಕಾರ್ಯವನ್ನು ತೆಗೆದುಕೊಳ್ಳಲಾಗುತ್ತಿದೆ. ದಕ್ಷಿಣ ಕನ್ನಡ ಜಿಲ್ಲೆಯ ಶಶಿಹಿತ್ತು, ಮಂಲ್ಕಿ, ಹಂಗಾರಕಟ್ಟೆ, ಗಂಗೊಳ್ಳಿ, ಶಿರೂರು, ಅಳ್ವೆಗದ್ದೆ ಮತ್ತು ಉತ್ತರ ಕನ್ನಡ ಜಿಲ್ಲೆಯ ತೆಂಗಿನಗುಂಡಿ, ಕೇಣಿ, ವಾಜಗಿ ಇವುಗಳಲ್ಲಿ ಕೆಲಸವನ್ನು ಅಭಿವೃದ್ಧಿ ಪಡಿಸಬೇಕೆದು ಬೇಡಿಕೆ ಇದೆ. ಇನೇ ಪಂಚವಾರ್ಷಿಕ ಯೋಜನೆಯಲ್ಲಿ ಇವುಗಳಲ್ಲಿ ಕೆಲಸವನ್ನು ಅಭಿವೃದ್ಧಿಪಡಿಸುವ ಗುರಿ ಇದೆ.

ಈ ವಿಮಾನುಗಾರಿಕೆ ಋತುವಿನಲ್ಲಿ, ಮಂಗಳೂರು ಹಳೆ ಬಂದರಿನ ಅಳಿವೆ ಬಾಗಿಲಿನಲ್ಲಿ, ಇದುವರೆಗೆ ೧೫ ಯಾಂತ್ರೀಕೃತ ದೋಣಿಗಳು ಅಪಘಾತಕ್ಕೀಡಾಗಿ ಇಬ್ಬರು ವಿಮಾನುಗಾರರು ಸಾವಿಗೀಡಾಗಿದ್ದಾರೆ. ಇದಲ್ಲದೆ, ಗಂಗೊಳ್ಳಿಯಲ್ಲಿ ಒಂದು ಯಾಂತ್ರೀಕೃತ ದೋಣಿಯು ಅಪಘಾತಕ್ಕೀಡಾಗಿದೆ.

ಪಶ್ಚಿಮ ಕರಾವಳಿಯಲ್ಲಿ ನೈರುತ್ಯ ಮಾರುತದ ಪ್ರಭಾವವು ಕುಗ್ಗದೆ ಇರುವ ಸಮಯದಲ್ಲಿ ಸಮುದ್ರದಲ್ಲಿ ಅಲೆಗಳ ರಭಸ ಸಹ ಕುಗ್ಗಿರುವುದಿಲ್ಲ. ಇಂತಹ ಪ್ರತಿಕೂಲ ಹವಾಮಾನ ಪರಿಸ್ಥಿತಿಯಲ್ಲಿ ನಾವೆಗಳು ಸಮುದ್ರದಲ್ಲಿ ವಿಮಾನುಗಾರಿಕೆಗೆ ಕೊಡಗಿರುವುದರಿಂದ ದುರಂತಗಳು ಸಂಭವಿಸುತ್ತದೆ. ಈ ಪ್ರಯತ್ನವು ನಿಯಮಬಾಹಿರವಾಗಿರುತ್ತದೆ.

ಸಮುದ್ರದ ಅಳಿವೆಯಲ್ಲಿ ಹೂಳೆತ್ತಲು ಇಲಾಖೆಯಲ್ಲಿ ಸೂಕ್ತ ಹೂಳೆತ್ತುವ ಯಂತ್ರವು ಲಭ್ಯವಿಲ್ಲದೆ ಇದ್ದ ಕಾರಣ ಈ ಕೆಲಸವನ್ನು ಸ್ಪರ್ಧಾತ್ಮಕ ಟೆಂಡರು ಕರೆದು ಖಾಸಗಿ ಗುತ್ತಿಗೆದಾರರಿಗೆ ೧೯೮೭-೮೮ರಲ್ಲಿ ವಹಿಸಿ ಕೊಡಲಾಗಿತ್ತು. ಸದ್ರಿ ಗುತ್ತಿಗೆದಾರರಿಗೆ ಹೂಳೆತ್ತುವ ನಾವೆಯನ್ನು ಅದರ ಯಂತ್ರೋಪಕರಣ ಗಳೊಂದಿಗೆ ಸ್ಥಳಕ್ಕೆ ಸಾಗಿಸಿ ಕೆಲಸ ಪ್ರಾರಂಭಿಸಲು ಮುಂಗಡ ಹಣ ಸಹ ಪಾವತಿ ಮಾಡಿದ್ದರೂ ಹೂಳೆತ್ತುವ ಕೆಲಸವನ್ನು ಮಾಡಲಿಲ್ಲ. ಆದ್ದರಿಂದ ಅವರಿಗೆ ನೀಡಿದ ಕಾಂಟ್ರಾಕ್ಟನ್ನು ರದ್ದುಗೊಳಿಸಿ, ಮುಂಗಡ ಹಣ ವಸೂಲಿ ಮಾಡಲಾಗಿದೆ. ಈ ಕೆಲಸವನ್ನು ಡ್ರೆಡ್ಜಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾ ಅವರಿಂದ ಮಾಡಿಸಲು ಉದ್ದೇಶಿಸಲಾಗಿದೆ.

ಕರ್ನಾಟಕ ಬಂದರುಗಳಲ್ಲಿ ಹೂಳೆತ್ತುವಿಕೆಯ ಬಗ್ಗೆ ಪರಿಶೀಲಿಸಲು ಸರ್ಕಾರದಿಂದ ನೇಮಿತವಾದ ಸಮಿತಿಯು ೧೯೮೮ರ ಜನವರಿ ತಿಂಗಳಲ್ಲಿ ಮಂಗಳೂರು ಮಲ್ಪೆ ಬಂದರುಗಳಿಗೆ ಭೇಟಿ ನೀಡಿದ್ದು ಅಲ್ಲಿನ ಸಮಸ್ಯೆಗಳನ್ನು ಪರಿಶೀಲಿಸಿ, ಅಳವೆಗಳಲ್ಲಿ ಹೂಳೆತ್ತುವ ಕೆಲಸಕ್ಕೆ ಸೂಕ್ತವಾದ ಹೂಳೆತ್ತುವ ನಾವೆ

ಯಂತ್ರಗಳು ಬಾಸಗಿ ಸಂಸ್ಥೆಗಳಿಲ್ಲಾಗಲೀಯಾ ಡ್ರೆಡ್ಜಿಂಗ್ ಕಾರ್ಪೋರೇಷನ್ ಆಫ್ ಇಂಡಿಯಾ ಸಂಸ್ಥೆಯಲ್ಲಾಗಲೀ ಸಧ್ಯಕ್ಕೆ ಲಭ್ಯವಿಲ್ಲದೆ ಇದ್ದ ಕಾರಣ, ಈ ಕೆಲಸವನ್ನು ಡ್ರೆಜ್ಜಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾರವರು ಸೂಕ್ತ ಯಂತ್ರೋಪಕರಣವನ್ನು ಖರೀದಿಸಿಯಾ ನಿರ್ಮಿಸಿ, ಆಧ್ಯತೆ ಮೇಲೆ ಮಂಗಳೂರು ಅಳಿವೆಯಲ್ಲಿ ಹೂಳೆತ್ತುವಿಕೆಯ ಕೆಲಸವನ್ನು ಕೈಗೆತ್ತಿಕೊಳ್ಳಬೇಕೆಂದು ತೀರ್ಮಾನಿಸಲಾಗಿದೆ. ಈ ದಿಸೆಯಲ್ಲಿ ಡಿ. ಸಿ. ಐ. ಸಂಸ್ಥೆಯು ಕಾರ್ಯ ಪ್ರವೃತ್ತರಾಗಿರುವುದಾಗಿ ತಿಳಿಸಿರುತ್ತದೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಈಗ ಮಿನುಗಾರರು ತಮ್ಮ ಬೇಡಿಕೆಯನ್ನು ಸಲ್ಲಿಸಿ ಜಿಲ್ಲಾಧಿಕಾರಿಗಳ ಕಚೇರಿ ಎದುರುಗಡೆ ಮಂಷ್ಕರವನ್ನು ಹೂಡುತ್ತಿದ್ದಾರೆ. ತಾವೇ ಒಪ್ಪಿಕೊಂಡ ಪ್ರಕಾರ ೧೫ ಯಾಂತ್ರೀಕೃತ ದೋಣಿಗಳು ಈ ಋತುವಿನಲ್ಲಿ ತೊಂದರೆ ಗೀಡಾಗಿವೆ. ಮತ್ತು ವರ್ಷ ವರ್ಷ ಅನೇಕ ಜನರ ಪ್ರಾಣ ಹಾನಿಯಾಗುತ್ತಿದೆ ಅದಕ್ಕೆ ಕಾರಣವೇನೆಂಬ ಬಗ್ಗೆ ನಿಮ್ಮ ಅಧಿಕಾರಿಗಳು ಬಹುಶಃ ನಿಮಗೆ ಸರಿಯಾದಂತಹ ಮಾಹಿತಿಯನ್ನು ಕೊಟ್ಟಿಲ್ಲವೆಂದು ನನಗನ್ನಿಸುತ್ತದೆ. ಪಶ್ಚಿಮ ಕರಾವಳಿಯಲ್ಲಿ ನೈರುತ್ಯ ಮಾರುತದ ಪ್ರಭಾವವು ಕಂಗ್ಗದೆ ಇರುವ ಸಮಯದಲ್ಲಿ ಸಮುದ್ರದಲ್ಲಿ ಅಲೆಗಳ ರಭಸ ಸಹ ಕಂಗ್ಗಿರುವುದಿಲ್ಲ. ಇಂತಹ ಪ್ರತಿಕೂಲ ಹವಾಮಾನ ಪರಿಸ್ಥಿತಿಯಲ್ಲಿ ನಾವೆಗಳು ಸಮುದ್ರದಲ್ಲಿ ಮಿನುಗಾರಿಕೆಗೆ ತೊಡಗಿರುವುದರಿಂದ ದುರಂತೆಗಳು ಸಂಭವಿಸುತ್ತವೆ ಎಂದು ತಾವು ಉತ್ತರದಲ್ಲಿ ಹೇಳಿದ್ದೀರಿ.

ನದಿ ಸಮುದ್ರಕ್ಕೆ ಸೇರುವಂಥ ಅಳಿವೆಯಲ್ಲಿ ಹೊಯ್ಗೆ ಅಕ್ಯುಮ್ಯುಲೇಟ್ ಆಗಿ ಈ ದೋಣಿಗಳು ಅಲ್ಲಿ ದಾಟುವಾಗ ಈ ಅನಾಹುತಗಳಾಗುತ್ತಿದೆ. ಅದು ಯಾವುದೇ ಒಂದು ಆಕಸ್ಮಿಕವಾಗಿ ಅಥವಾ ಪ್ರಕೃತಿಯ ಆಕ್ರೋಶದಿಂದ ಆಗತಕ್ಕಂಥದ್ದಲ್ಲ. ಎಲ್ಲಾ ಕಡೆಯೂ ಈ ಸಮಸ್ಯೆಯು ಇರತಕ್ಕಂಥದ್ದೇ. ಇದಕ್ಕೆ ಏನು ಕಾರಣವನ್ನು ಕೊಟ್ಟಿದ್ದಾರೆ, ಇದರಿಂದ ಏನು ತಿಳಿಯಂತ್ತದೆ ಎಂದರೆ ಸರಿಯಾದ ಒಂದು ಸತ್ಯದ ಪರಿಚಯ ತಮ್ಮ ಅಧಿಕಾರಿಗಳಿಗಿಲ್ಲ ಎಂದು I think, you will have to haul up the officers. ಮಿನುಗಾರರ ಬಗ್ಗೆ ನಮ್ಮ ಸದಸ್ಯಿಣಿಯವರಾದಂಥ ಶ್ರೀಮತಿ ಮನೋರಮಾ ಮಧ್ವರಾಜ್‌ರವರು ಕೂಡಾ ಹೇಳುತ್ತಾರೆ. ಏಕೆಂದರೆ ಆ ಸೀಸನ್‌ನಲ್ಲಿ ಮಾತ್ರ ಹೋಗತಕ್ಕಂಥದ್ದು. ಆ ಸೀಸನ್‌ನಲ್ಲಿ ಹೋದಾಗಲೇ ಅಪಘಾತ ಆಗತಕ್ಕಂಥದ್ದು. ಇದರಲ್ಲಿ ಇನ್ನೊಂದು ಆಶ್ಚರ್ಯದ ಸಂಗತಿ ಎಂದರೆ ಈಗ ಸರ್ಕಾರಿ ಆದೇಶ ಸಂಖ್ಯೆ ಪಿಡಬ್ಲ್ಯೂಡಿ ೧೧೨ ದಿನಾಂಕ: ೯-೪-೮೭ ಆದರ ಪ್ರಕಾರ ಸುಮಾರು ಹನ್ನೆರಡೂವರೆ ಕೋಟಿ ರೂಪಾಯಿ ಖರ್ಚು ಮಾಡಿ ಒಂದು ಅಂದಾಜು ಪಟ್ಟಿಯಾಗಿ ಅದಕ್ಕೆ ಆಡಳಿತ ಮಂಜೂರಾತಿಯನ್ನು ಕೂಡಾ ಕೊಟ್ಟಿದ್ದಾರೆ. ಏಳನೇ ಪಂಚವಾರ್ಷಿಕ ಯೋಜನೆಯಲ್ಲಿ ಈ ಹೂಳೆತ್ತುವ ಕಾರ್ಯಕ್ರಮ ಮತ್ತು ಉದ್ದವಾದ ವಾರ್ಫ್ ನಿರ್ಮಾಣ, ಬ್ರೇಕ್ ವಾಟರ್‌ಗಳ ನಿರ್ಮಾಣ ಮತ್ತು ಗಂಗಾವಳಿ ನೇತ್ರಾವತಿನದಿ ದಂಡೆಗಳ ಸಂರಕ್ಷಣೆ ಮತ್ತು ಕ್ರೇನ್ ಡ್ರೆಜ್ಜರ್ ಸರ್ವೆ ನಾವೆಯನ್ನು ಖರೀದಿಸಲು ಟ್ರಾನ್ಸಿಟ್ ಷೆಡ್, ವಸತಿ ಸೌಕರ್ಯ ಇತರ ಕಾರ್ಯ ಎಂದು ಹೇಳಿ ಹನ್ನೆರಡೂವರೆ ಕೋಟಿ ರೂಪಾಯಿ ಕೆಲಸ ಕಾರ್ಯಗಳನ್ನು ಮಾಡಬೇಕು ಎಂದು ಹೇಳಿ ಆಡಳಿತ ಮಂಜೂರಾತಿಯನ್ನು ಕೂಡಾ ಕೊಟ್ಟಿದ್ದಾರೆ. ಆದರ ಬಗ್ಗೆ ತಮ್ಮ ಹೇಳಿಕೆಯಲ್ಲಿ ಆದರ ಪ್ರಸ್ತಾಪ ಇಲ್ಲ. ಅದು ಹಳೆಯ ಕಾಲದ್ದು. ಹಿಂದೆ ಮಾಡಿದ ಐದಾರು ವರ್ಷಗಳ ಹಿಂದಿನ ಕಾರ್ಯಕ್ರಮದ ಪ್ರಸ್ತಾಪ ಇದೆಯೇ ಹೊರತು ೮೭ನೇ ಇಸವಿಯಲ್ಲಿ ಆಡಳಿತ ಮಂಜೂರಾತಿಯನ್ನು ಕೊಟ್ಟಂಥ ಸರ್ಕಾರಿ ಆಜ್ಞೆ ಬಗ್ಗೆ ಪ್ರಸ್ತಾಪ ಇಲ್ಲ. ಈ ಹನ್ನೆರಡೂವರೆ ಕೋಟಿ ರೂಪಾಯಿಯಲ್ಲಿ ಏಳನೇ ಪಂಚವಾರ್ಷಿಕ ಯೋಜನೆಯಲ್ಲಿ ಇದರಲ್ಲಿ ಹತ್ತು ಕೋಟಿ ರೂಪಾಯಿ ಏಳನೇ ಪಂಚವಾರ್ಷಿಕ ಯೋಜನೆಯಲ್ಲಿಯೇ ಖರ್ಚು ಮಾಡಬೇಕು ಎಂದು ಇದರ ಪ್ರಕಾರ ಇದೆ. ಆ ಸರ್ಕಾರಿ ಆಜ್ಞೆ ಇಲ್ಲಿದೆ. ಏಳನೇ ಪಂಚವಾರ್ಷಿಕ ಯೋಜನೆಯಲ್ಲಿ ಒಟ್ಟು ವೆಚ್ಚವನ್ನು ಹತ್ತು ಕೋಟಿ ರೂಪಾಯಿಗಳಿಗೆ ಸೀಮಿತಗೊಳಿಸಬೇಕು. ಈ ಹತ್ತು ಕೋಟಿ ರೂಪಾಯಿಯನ್ನು ಏಳನೇ ಪಂಚವಾರ್ಷಿಕ ಯೋಜನೆಯಲ್ಲಿ ಖರ್ಚು ಮಾಡಬೇಕು ಎಂದು ಅಲ್ಲಿ ಇರತಕ್ಕಂಥದ್ದು. ಆದರಲ್ಲಿ ತಾವು ಡ್ರೆಜ್ಜಿಂಗ್ ಕಾರ್ಪೊರೇಷನ್ ತರಬೇಕು ಈ ಹೂಳೆತ್ತುವ ಕಾರ್ಯಕ್ರಮಕ್ಕಾಗಿ ಎಂದು ಹೇಳಿ ಅದು ಕೂಡಾ ಬಹಳ ನಿಧಾನವಾಗಿ ನಡೆದಿದೆ. ಅದನ್ನು ಕಂಟ್ರಾಕ್ಟರ್‌ಗೆ ಕೊಟ್ಟಿದ್ದೀರಿ. ಯಾರಿಗೆ ಕೊಟ್ಟಿದ್ದೀರಿ ? ಯಾರಿಗೆ ಕಂಟ್ರಾಕ್ಟನ್ನು ಕೊಟ್ಟಿದ್ದೀರಿ ಎಂದರೆ ಯಾರಿಗೆ ಕೆಲಸ ಮಾಡಲಿಕ್ಕೆ ಕೆಪಾಸಿಟಿ ಇಲ್ಲವೋ, ಯಾರು ಅಸಮರ್ಥರು ಇದ್ದಾರೋ ಅವರಿಗೆ ಕೊಟ್ಟಿದ್ದೀರಿ. ಏಜೆನ್ಸಿಗಳಿಗೆ ಕೊಟ್ಟರೆ ಕೆಲಸ ಹೇಗೆ ಆಗುತ್ತದೆ ? ಅವರು ಕೆಲಸವನ್ನು ಮಾಡುವುದಿಲ್ಲ. ಹಳೆಯ ಮೆಷಿನರಿಯನ್ನು ತಂದರು, ಅಲ್ಲಿ ಸ್ಕ್ರಾಕ್ ಮಾಡಿದರು, ಮತ್ತೆ ಅದನ್ನು ಕೊಂಡು ಹೋದರು, ಏನಾ

ಮಾಡುತ್ತಿದ್ದಾರೆ, ಏನೂ ಮಾಡಿಲ್ಲ. ತಮ್ಮ ಅಧಿಕಾರಿಗಳು ಏನು ಮಾಡುತ್ತಿದ್ದಾರೆ ? ಅದನ್ನು ಏತಕ್ಕೆ ಅವರಿಗೆ ಕೊಡಬೇಕಾಗಿತ್ತು ? ಡ್ರೆಜ್ಜಿಂಗ್ ಕಾರ್ಪೊರೇಷನ್‌ನವರಿಗೆ ಈಗಾಗಲೇ ಹಣವನ್ನು ಮುಂಗಡವಾಗಿ ಕೊಡುತ್ತಿದ್ದರೆ ಇವತ್ತಿನ ದಿವಸ ಅಲ್ಲಿ ಕೆಲಸ ಆಗುತ್ತಿತ್ತು. ಅದನ್ನು ವಿಷಕ್ಕೆ ತಾವು ಮಾಡಲಿಲ್ಲ ? ಸರ್ಕಾರಕ್ಕೆ ನಿಜವಾಗಿಯೂ ಮನಸ್ಸಿದ್ದರೆ ಅದರ ಬಗ್ಗೆ ಕ್ರಮ ತೆಗೆದುಕೊಳ್ಳಿ. ತಪ್ಪಿಗೆ ಖಂಡಿತವಾಗಿ ಮನಸ್ಸು ಇದೆ ಎಂದು ನಾನು ತಿಳಿದುಕೊಂಡಿದ್ದೇನೆ. How bureaucracy misleads the Minister ? This is the tragic monument for this. Absolutely, no mention about it. ಏಕೆಂದರೆ ತಾಳ್ಮೆ ಪರೀಕ್ಷೆ ಮಾಡುವುದಕ್ಕೂ ಅದಕ್ಕೂ ಒಂದು ಮಿತಿ ಇರಬೇಕಾಗುತ್ತದೆ. ಇಲ್ಲಿ ಏನಾಗಿದೆ ಅಧ್ಯಕ್ಷರೇ, ತಮಗೆ ಗೊತ್ತಿರಬಹುದು, ಅವರು ಕೂಡಾ ಆ ಜಾಗವನ್ನು ಇನ್ಸ್‌ಪೆಕ್ಟ್ ಮಾಡಿರಬಹುದು. ನಾವು ಆರ್ಥವಂತ್ರಿಯಾಗಿರುವ ಅಲ್ಲಿ ಇಂಥ ಪ್ರಸಂಗಗಳಲ್ಲಿ ಬೇಂದ್ರೆ ಎಂದು ಅಲ್ಲಿ ಒಂದು ಜಾಗ ಇದೆ. ಅಳಿವೆಗೆ ಪಕ್ಕದಲ್ಲಿರತಕ್ಕಂಥ ಜಾಗ ಬೇಂದ್ರೆ ಎಂದಂ ದ್ವೀಪ. ಈಗಾಗಲೇ ಅದು ಮುಳುಗಿ ಹೋಗುತ್ತಿತ್ತು. ನಾವು ಕಲ್ಲಿನ ಗೋಡೆಯನ್ನು ಕೂಡಲೇ ಅಲ್ಲಿ ಅದರ ಬಗ್ಗೆ ಕಟ್ಟಿದ್ದೇವೆ. ಆದ್ದರಿಂದ ಬೇಂದ್ರೆ ಉಳಿಯಿತು. ಬಹುಶ: ಯಾವುದು ಅಳಿವೆ ಗಡಿ ಇದೆ, ಅದಕ್ಕೆ ತಾವು ಇಮ್ಮೈಡಿಯೇಟ್ ಆಗಿ ಒಂದು ಸ್ಪೂನ್ ಪಾಲನ್ನು ಕಟ್ಟಿದ್ದರೆ ತಕ್ಷಣ ಎಲ್ಲಾ ಹೊಯ್ದ ಹೊರಗಡೆಯೇ ಅಕ್ಯುಮ್ಯುಲೇಟ್ ಆಗಿ ಒಳಗಡೆ ಬರಲಾರದು. To that extent even before you take up the dredging, you can prevent accumulation. ಇದನ್ನು ಮಾಡಲು ಪ್ರಾವಿಷನ್ ಇದೆ. ಇದನ್ನು ಮಾಡಿ ಬ್ರೇಕ್ ವಾಟರ್ ತಡೆ ಮಾಡಲಿಕ್ಕೆ ಏನು ತೊಂದರೆ ಇದೆ ನಿಮಗೆ ? ವಾರ್ಫ್ ನಿರ್ಮಾಣಕ್ಕೆ ಮಾಡಿ ನೇತ್ರಾವತಿ ನದಿ ದಂಡೆ ಸಂರಕ್ಷಣೆ ಮತ್ತು ಗುರುಪುರ ನದಿ ದಂಡೆಗಳ ಸಂರಕ್ಷಣೆ ಇವುಗಳ ಬಗ್ಗೆ ಸಕಾಲದಲ್ಲಿ ಕ್ರಮವನ್ನು ತೆಗೆದುಕೊಳ್ಳಬೇಕಾಗಿತ್ತು. ಬೇರೆ ಡ್ರೆಜ್ಜಿಂಗ್ ಕೆಲಸಕ್ಕೆ ಆಗಲೀ ಅಥವಾ ಇತರ ಕೆಲಸಗಳಿಗೇ ಆಗಲಿ. You could have called for tenders. for break-water warf. ಇದು ಒಂದು ರೀತಿಯ ನಿವನ ಆಗುತ್ತದೆ. ಈಗಲಾದರೂ ಇದರ ಬಗ್ಗೆ ಆಸಕ್ತಿ ಸರ್ಕಾರಕ್ಕೆ ಇದೆಯೋ ಇಲ್ಲವೋ ನೋಡೋಣ.

ಅಧ್ಯಕ್ಷರು.—ಮೊಯಿಲಿಯವರೇ ಆಮೇಲೆ ಬೇಕಾದರೆ ಅವಕಾಶ ಕೊಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅಧ್ಯಕ್ಷರೇ. ಆಯಿತು. ಇದರ ಬಗ್ಗೆ ಅಡ್ಜರ್ನ್‌ಮೆಂಟ್ ಮೋಷನ್ನನ್ನು ತರಬೇಕು ಎಂದು ಇದ್ದೆವು. ಆದರೆ ಅದನ್ನು ತರಲಿಲ್ಲ. ಏಕೆಂದರೆ ಸಮಯವನ್ನು ನೋಡಬೇಕು ನಿಯಮ ಸಂಹಿತೆಯಲ್ಲಿ ಕೆಲಸ ಮಾಡಬೇಕು ಎಂದು ತಾಳ್ಮೆಯಿಂದ ಕೂತಿದ್ದೆವು. ಮಿನುಗಾರರಿಗೆ ತಾಳ್ಮೆ ಇಲ್ಲ. To-day they have given ultimatum. ಇವತ್ತು ಸೂಕ್ತವಾದ ಕಾರ್ಯಕ್ರಮವನ್ನು ಇವರು ತೆಗೆದುಕೊಳ್ಳದಿದ್ದರೆ ಅವರೇನೂ ಕಾರ್ಯಕ್ಕೆ ಇಳಿಯುತ್ತಾರೋ ಏನೋ ಎಂದು ಗೊತ್ತಿಲ್ಲ. ಎಂಟನೇ ದಿವಸದಿಂದ ಮುಷ್ಕರ ಮಾಡುತ್ತಿದ್ದಾರೆ. In the annual plan outlay for 86 87 you have provided Rs. 4.97 crores and the revised estimate was Rs. 1 47 crores. ತಾವು ಎಷ್ಟು ಕೊಟ್ಟಿದ್ದೀರಿ ? ೪.೯೭ ಕೋಟಿ ರೂಪಾಯಿ ಪ್ರೊವೈಡ್ ಮಾಡಿದ್ದೀರಿ. ಖರ್ಚು ಮಾಡಬೇಕಾಗಿದ್ದು ಅದರಲ್ಲಿ ಎಷ್ಟು ಎಂದು ಹೇಳಿದರೆ ರಿವೈಸ್ಡ್ ಎಸ್ಟಿಮೇಟ್ ೧.೪೭ ಕೋಟಿ ರೂಪಾಯಿ. ನಿಜವಾಗಿ ಎಷ್ಟು ಖರ್ಚು ಮಾಡ ಬೇಕಾಗಿತ್ತು ಎಂದರೆ ೧.೦೧ ಕೋಟಿ ರೂಪಾಯಿ ಇದೆ, ಇದು ಯಾವುದಕ್ಕೆ ? It is not even sufficient for maintenance. I am not referring to Mangalore old port. ಮಂಗಳೂರಿನ ಹಳೆ ಬಂದರಿಗೆ ಖರ್ಚು ಮಾಡಿಲ್ಲ. ಮೈನರ್ ಪೋರ್ಟ್‌ಗೆ ಖರ್ಚು ಮಾಡುತ್ತಿರತಕ್ಕಂಥ ಹಣ ೮೭–೮೮ಕ್ಕೆ ೩.೭೦ ಕೋಟಿ ರೂಪಾಯಿ ಕೊಟ್ಟಿದ್ದೀರಿ, ಖರ್ಚು ಮಾಡಿದ್ದು ಎಷ್ಟು ಎಂದರೆ ೨.೨೦ ಕೋಟಿ ರೂಪಾಯಿ, ೮೮ಕ್ಕೆ ೩.೫೦ ಕೋಟಿ ರೂಪಾಯಿ ಕೊಟ್ಟಿದ್ದೀರಿ, ಇನ್ನೊಂದು ವರ್ಷದಲ್ಲಿ ಏಳನೇ ಪಂಚವಾರ್ಷಿಕ ಯೋಜನೆ ಮುಗಿದು ಹೋಗುತ್ತಿದೆ. ಹತ್ತು ಕೋಟಿ ರೂಪಾಯಿಯಲ್ಲಿ ಒಂದು ಚಿಕ್ಕಾಸು ಕೂಡಾ ಖರ್ಚು ಮಾಡತಕ್ಕಂಥ ಒಂದು ಕಾರ್ಯಕ್ರಮವನ್ನು ಇವತ್ತು ನಿಮ್ಮ ಸರ್ಕಾರ ತೆಗೆದುಕೊಳ್ಳದಿದ್ದರೆ ತಮಗೆ ಮಿನುಗಾರರ ಬಗ್ಗೆ ಅಥವಾ ಅವರ ಪ್ರಾಣದ ಬಗ್ಗೆ, ಅವರ ತೊಂದರೆಯ ಬಗ್ಗೆ ಮತ್ತು ಅವರ ದೋಣಿಯನ್ನು ಸಂರಕ್ಷಣೆ ಮಾಡುವ ಬಗ್ಗೆ ಏನು ಕಾಳಜಿ ಈ ಸರ್ಕಾರಕ್ಕೆ ಇದೆ ಎಂಬುದನ್ನು ತಾವು ದಯವಿಟ್ಟು ಹೇಳಬೇಕು. ತಾವು ಹಿರಿಯ ಸಚಿವರು

ಇದ್ದೀರಿ, ತಾವು ಇದಕ್ಕೆ ಉತ್ತರ ಕೊಡತಕ್ಕಂಥ ಒಂದು ಈ ಕಾರ್ಯ ತಮ್ಮ ಪಾಲಿಗೆ ಬಂದಿದೆ. ಅದರ ಬಗ್ಗೆ ತಾವು ತಕ್ಷಣ ಇವತ್ತೇ ಸಂಬಂಧಪಟ್ಟಂಥ ಅಧಿಕಾರಿಗಳನ್ನು ಕರೆಸಿ ಏನಂ ಇವತ್ತು ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕಂ. ಆ ನದಿ ದಂಡೆಗೆ ಆ ಆಳಿವೆ ದಡದಲ್ಲಿ ಏನು ಕಲ್ಲು ಕಟ್ಟಬಹುದೋ ಅದನ್ನು ಕಟ್ಟಬೇಕಾಗುತ್ತದೆ. Some of these works you can take straightway departmentally. You can make order because the administrative approval and the technical sanction has already been given. ಬಹುಶಃ ಇದನ್ನು ತಕ್ಷಣ ಮಾಡಿದರೆ ಇದರ ಬಗ್ಗೆ ತಾವು ನಾಳೆಯೇ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯ ಇದೆ. ಈ ವಿಷಯದಲ್ಲಿ ಎಂಜಿನಿಯರಿಂಗ್, ಬೇರೆ ಆಶ್ವಾಸನೆಗಳನ್ನು ಕೊಟ್ಟು ಬಂದಿದ್ದಾರೆ, ಅದರೆ ಅದು ಕಾರ್ಯಗತ ವಾಗಲಿಲ್ಲ. ನಾಳೆಯಿಂದಲೇ ಇದರ ಬಗ್ಗೆ ಕಾರ್ಯಗತ ಮಾಡತಕ್ಕಂಥ ಒಂದು ಕಾರ್ಯಕ್ರಮವನ್ನು ತೆಗೆದುಕೊಳ್ಳಿ. ಏಕೆಂದರೆ ಎಂಟು ದಿವಸಗಳಿಂದ ಮುಂಜ್ಞಾರವನ್ನು ಆ ಎಂಜಿನಿಯರುಗಳು ಮಾಡುತ್ತಿದ್ದಾರೆ. ಅವರ ಜೀವ ರಕ್ಷಣೆಗಾಗಿ, ಅವರ ಅನ್ನ ರಕ್ಷಣೆಗಾಗಿ ಮತ್ತು ಅವರ ಸಹಾಯಕ್ಕಾಗಿ ತಾವು ಬರಬೇಕಂ ಎಂದು ಅಧ್ಯಕ್ಷರ ಮುಖಾಂತರ ಸರ್ಕಾರದವರಲ್ಲಿ ನಾನು ಕೇಳಿಕೊಳ್ಳುತ್ತೇನೆ.

೧೦-೦೦ ಎ. ಎಂ.

† ಶ್ರೀಮತಿ ಮನೋರಮಾ ಮಧ್ವರಾಜ್ (ಉಡುಪಿ).—ಮಾನ್ಯ ಅಧ್ಯಕ್ಷರೇ, ಮಾಪ್ಯ ಮಂತ್ರಿಗಳು ಉತ್ತರವನ್ನು ಕೊಡುತ್ತಾ "ಪಶ್ಚಿಮ ಕರಾವಳಿಯಲ್ಲಿ ನೈರುತ್ಯ ಮಾರುತದ ಪ್ರಭಾವವು ಕಂಗ್ಗದೆ ಇರುವ ಸಮಯದಲ್ಲಿ ಸಮುದ್ರದಲ್ಲಿ ಅಲೆಗಳ ರಭಸ ಸಹ ಕಂಗ್ಗಿರುವುದಿಲ್ಲ. ಇಂತಹ ಪ್ರತಿಕೂಲ ಹವಾಮಾನ ಪರಿಸ್ಥಿತಿಯಲ್ಲಿ ನಾವೆಗಳು ಸಮುದ್ರದಲ್ಲಿ ಮೀನುಗಾರಿಕೆಗೆ ತೊಡಗಿರುವುದರಿಂದ ದುರಂತಗಳು ಸಂಭವಿಸುತ್ತದೆ. ಈ ಪ್ರಯತ್ನವು ನಿಯಮಬಾಹಿರವಾಗಿರುತ್ತದೆ ಎಂದು ಹೇಳಿದ್ದಾರೆ. ನನಗೆ ತಿಳಿದಮಟ್ಟಿಗೆ ಸರ್ಕಾರದ ಆದೇಶದ ಪ್ರಕಾರವೇ ಸೆಪ್ಟೆಂಬರ್ ೧ ರಿಂದ ಮೇ ೩೧ ರತನಕ ಈ ಮೀನುಗಾರರು ಮೀನುಗಾರಿಕೆಗೆ ತೊಡಗುತ್ತಾರೆ. ಹಾಗಿರುವಲ್ಲಿ ಇದು ನಿಯಮ ಬಾಹಿರ ಹೇಗೆ ಆಗುತ್ತದೆ ? ಡೈಜ್ಜಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾದವರು ೧೯೬೭ನೇ ಇಸವಿಯಲ್ಲಿ ಅಲ್ಲಿಯ ಅಧ್ಯಕ್ಷರಾದ ಕ್ಯಾಪ್ಟನ್ ಆಬ್ರಹಾಂರವರಂ ಏನಂ ಹೇಳಿದ್ದಾರೆ ಎಂದರೆ ರಾಜ್ಯ ಸರ್ಕಾರ ಬಯಸಿದರೆ ಹಳೆಯ ಒಂದರಿನ ಹೊಳೆತ್ತುವ ಕಾರ್ಯಕ್ಕೆ ಸಿದ್ಧ ವಿದ್ದೇವೆಂದು ತಿಳಿಸಿದ್ದಾರೆ. ಅವರಿಗೆ ನೀವು ಯಾವಾಗ ಕಂಟ್ರಾಕ್ಟ್‌ನ್ನು ಕೊಟ್ಟಿದ್ದೀರಿ ? ಏತಕ್ಕೆ ಇಷ್ಟರತನಕವೂ ಅವರುಗಳು ಅಲ್ಲಿ ಕೆಲಸವನ್ನು ಮಾಡಲಿಲ್ಲ. ತಮ್ಮ ಕೆಲವೊಂದು ಆಶ್ವಾಸನೆಗಳನ್ನು ತಮ್ಮ ಮುಂಗಾರು ಪತ್ರಿಕೆಯಲ್ಲಿ ೧೨-೧೨-೧೯೬೭ರಲ್ಲಿ ಕೊಟ್ಟಿದ್ದಾರೆ. ಇಂಥ ಸಂದರ್ಭದಲ್ಲಿ ಅವರು ಮುಂದೆ ಬಂದಿದ್ದಾಗಲೂ ಅವರಿಗೆ ಇದನ್ನು ಕೊಡದೆ ಇಷ್ಟೊಂದು ಸಮಯವನ್ನು ನೀವು ತೆಗೆದುಕೊಂಡಿದ್ದರ ಅರ್ಥವೇನು ? ನಿಜವಾಗಿ ನಿಮಗೆ ಕಳಕಳಿ ಇದ್ದರೆ ಆ ಬಡ ಮೀನುಗಾರರ ಸ್ವತ್ತು ಹಾನಿ, ಜೀವ ಹಾನಿ ಆಗುತ್ತಿರುವ ಸಂದರ್ಭದಲ್ಲಿ ಸರ್ಕಾರವು ನಿರ್ಲಕ್ಷ್ಯ ಭಾವನೆಯಿಂದ ಇರುವುದು ಎಳ್ಳಷ್ಟು ನಿಮಗೆ ಭೂಷಣಪ್ರಾಯವಾಗಲ್ಲ ಎಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಅಷ್ಟೇ ಅಲ್ಲ, ಅಲ್ಲಿಗೆ ಸಂದರ್ಭಪಟ್ಟು ಮೂರು ನಾಲ್ಕು ಜನ ಮಂತ್ರಿಗಳು ಬಹುಶಃ ಲೆಜಿಸ್ಲೇಚರಿಂದ ಎಲ್ಲರೂ ಹೋದರು, ಅಲ್ಲಿ ಹೋಗಿ ಆಶ್ವಾಸನೆಯನ್ನು ಕೊಡುತ್ತಾ ಬರುವುದೂ, ಇಲ್ಲಿ ಬಂದ ನಂತರ ಯಾವುದೇ ಒಂದು ಕೆಲಸಕಾರ್ಯದಲ್ಲಿ ತೊಡಗದೇ ಆ ಜನರ ಒಂದು ಶಾಪಕ್ಕೆ ತಾವು ತುತ್ತಾಗಿದ್ದೀರಿ ಎಂದೂ ಹೇಳಿದರೆ ತಪ್ಪಾಗಲಿಕ್ಕಿಲ್ಲ. ದಯವಿಟ್ಟು ಇನ್ನಾದರೂ ನಿಮ್ಮ ಪ್ರತಿಷ್ಠೆಯನ್ನು ಬಿಟ್ಟುಬಿಟ್ಟು ಕೆಲಸವನ್ನು ಮಾಡಿ. ನಿಮ್ಮಲ್ಲಿ ಒಂದು ಸಂಶಯ ಇರಬಹುದು, ಬಡ ಮೀನುಗಾರರು ಸಾಧಾರಣವಾಗಿ ಶೇಕಡ ೧೦೦ಕ್ಕೆ ೯೦ ಮಂದಿ ಕಾಂಗ್ರೆಸ್ ಪಕ್ಷಕ್ಕೆ ಮತವನ್ನು ಕೊಡುತ್ತಾರೆ ಎಂಬ ಭಾವನೆಯೇನಾದರೂ ಇದ್ದರೆ ಅದು ಖಂಡಿತವಾಗಿ ತಪ್ಪು ಅಭಿಪ್ರಾಯ ಎಂದು ನಾನು ಭಾವಿಸಿದ್ದೇನೆ, ಇನ್ನಾದರೂ ಶ್ರೀಮಾನ್ ದೇವೇಗೌಡರು ಇತ್ತ ಕಡೆ ಗಮನವನ್ನು ಹರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನೊಂದು ದೌರ್ಭಾಗ್ಯದ ಸಂಗತಿ ಏನೆಂದರೆ ಈ ಒಂದು ಕೆಲಸ ಮೀನುಗಾರಿಕೆ ಇಲಾಖೆಗೆ ಸೇರಿದೆ. ಅಲ್ಲಿ

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಪೋರ್ಟ್‌ನಲ್ಲಿ ಹೂಳೆತ್ತುವ ಕಾರ್ಯಕ್ರಮವನ್ನು ಮಾಡಬೇಕಾಗಿರುವುದು ಬಂದರಿನವರು. ನಾನು ಹೇಳುವುದು ಏನೆಂದರೆ ಯಾರು ಫಿಸರೀಸ್ ಮಿನಿಸ್ಟರ್ ಆಗಿರುತ್ತಾರೋ ಅವರಿಗೇ ಈ ಬಂದರನ್ನು ಕೂಡಾ ಕೊಟ್ಟರೆ ಒಬ್ಬರೇ ಮಂತ್ರಿಗಳು ಈ ಒಂದು ಕಾರ್ಯಕ್ರಮವನ್ನು ಹಾಕಿಕೆ ಳ್ಳಲಿಕ್ಕೆ ಅನುವಾಗುತ್ತದೆ ಎಂದು ಈ ನಿಟ್ಟಿನಲ್ಲಿ ಹೇಳುತ್ತಿದ್ದೇನೆ. ಎರಡೂ ವಿಷಯಗಳನ್ನು ಒಬ್ಬರೇ ಮಂತ್ರಿಗಳಿಗೆ ಪಹಿಸಿಕೊಟ್ಟರೆ ಕೆಲಸ ಮಾಡಲಿಕ್ಕೆ ಸಾಧ್ಯ ಉಂಟು. ಅಷ್ಟೇ ಅಲ್ಲ, ೫೦ ವರ್ಷದ ಹಿಂದಿನ ಈ ಬ್ರಿಟಿಷ್ ಅಳ್ವಿಕೆಯಲ್ಲಿರುವಂಥ ಒಂದು "ಎಸ್.ಟಿ. ಗ್ರೂಪ್" ಡ್ರೆಜ್ಜಿಂಗ್ ಉಂಟು. ಅದು ವರ್ಷಕ್ಕೆ ಹತ್ತು ದಿವಸಗಳ ಕಾಲ ಬಂದು ನದಿಯೆಲ್ಲಿ ಹೂಳೆತ್ತುವುದು ಮತ್ತೆ ಒಳಗೆ ಹೋಗಿ ಕುಳಿತುಕೊಳ್ಳುವುದು, ಅಲ್ಲಿ ಮತ್ತೆ ಎಂಜಿನ್ ಕೂಡಾ ಸರಿಯಿಲ್ಲ, ಅದನ್ನು ನೀವು ಕಂಡಮ್ ಮಾಡಿ ಅದನ್ನು ತೀಕ್ಷ್ಣವಾಗಿ ವಿಲೇವಾರಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಕೇರಳ ರಾಜ್ಯ ನಮಗಿಂತಲೂ ಒಂದು ಸಣ್ಣ ರಾಜ್ಯ. ಅಲ್ಲಿ ಕೂಡಾ ಸ್ವತಂತ್ರವಾಗಿ ಹೂಳೆತ್ತುವ ಕಾರ್ಯಕ್ರಮಗಳಿಗಾಗಿ ಅವರದೇ ಒಂದು ಡ್ರೆಜ್ಜಿಂಗನ್ನು ಸ್ಥಾಪಿಸಿರುವಾಗ ಇಷ್ಟೊಂದಾ ದೊಡ್ಡ ಕರ್ನಾಟಕ ರಾಜ್ಯಕ್ಕೆ ಮೂರು ನೂರು ಕಿಲೋ ವಾಟರ್ ಕರೆಂಟಿನ ಉದ್ದದ ಒಂದು ಕರಾವಳಿಯನ್ನು ಹೊಂದಿರುವಂಥ ಈ ರಾಜ್ಯ ಸರ್ಕಾರಕ್ಕೆ ಯಾವುದೇ ಒಂದು ಸಣ್ಣ ಡ್ರೆಜ್ಜಿಂಗ್‌ನ್ನು ಇಟ್ಟುಕೊಳ್ಳುವುದಕ್ಕೆ ಒಂದು ಅವಕಾಶ ಇಲ್ಲ ಎಂದರೆ ನಿಜವಾಗಿ ನಾಚಿಕೆ ಪಡುವಂಥ ವಿಚಾರ. ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ ದಯವಿಟ್ಟು ಇನ್ನಾದರೂ ಪ್ರತಿಷ್ಠೆಯನ್ನು ಬಿಟ್ಟು ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಇವತ್ತು ಅಲ್ಲಿ ಎಂಟು ದಿವಸಗಳಿಂದ ಆ ಜನರು ಅನ್ನ ನೀರು ಬಿಟ್ಟು ಧರಣಿಯನ್ನು ಪ್ರಾರಂಭಿಸಿದ್ದಾರೆ ತಾವು ಯಾರಾದರೂ ಕೂಡಾ ಅಲ್ಲಿ ಹೋಗುವ ಒಂದು ಸೌಜನ್ಯವನ್ನು ತೋರಿಸಿಲ್ಲ ಅಥವಾ ಸಂಬಂಧಪಟ್ಟಂಥ ಅಧಿಕಾರಿಗಳನ್ನು ಕಳುಹಿಸುವ ಒಂದು ಆಸಕ್ತಿಯನ್ನೂ ಕೂಡಾ ತೋರಿಸಿಲ್ಲ. ನಾನು ಇನ್ನೊಂದು ವಿಚಾರವನ್ನು ಹೇಳುವುದೇನೆಂದರೆ, ನಾನು ಮೊನ್ನೆ ಅಲ್ಲಿ ಧರಣಿ ಕುಳಿತಲ್ಲಿಗೆ ಹೋದಾಗ ಅವರಲ್ಲಿ ತಿಳಿದುಬಂದ ಮಿತಾರ ಏನೆಂದರೆ ಒಬ್ಬರು ಮಾಜಿ ಅಧಿಕಾರಿಯವರು ಮದ್ರಾಸ್‌ನಲ್ಲಿ ಒಂದು ಹೊಸ ಡ್ರೆಜ್ಜಿಂಗನ್ನು ತಯಾರು ಮಾಡಿದ್ದಾರಂತೆ ಅವರೇ ಬಂದು ಇಲ್ಲಿ ಡ್ರೆಜ್ಜಿಂಗ್ ಕೆಲಸವನ್ನು ಮುಂದುವರೆಸುತ್ತಿದ್ದಾರೆ ಎಂದು ಒಂದು ಆಪಾದನೆ ಕೂಡಾ ಇದೆ ಇದನ್ನು ಕೂಡಾ ನೀವು ಕ್ಲಿಯರ್ ಮಾಡಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಮಾನ್ಯ ದೇವೇಗೌಡರು ತಾವು ಸುಮ್ಮನೆ ಮುಖಕ್ಕೆ ಕೈ ಇಟ್ಟುಕೊಂಡರೆ ಏನೂ ಆಗುವುದಿಲ್ಲ. ಸ್ವಲ್ಪ ಉದಾಸೀನ ಮನೋಭಾವವನ್ನು ಬಿಟ್ಟು ಕೆಲಸ ಮಾಡಬೇಕು. ಹಿಂದೆ ಸ್ವಲ್ಪ ಅಲಕ್ಷ್ಯದಿಂದ ಇದ್ದಿರಿ. ಈಗ ಬಹಳ ಚುರುಕಾಗಿದ್ದೀರಿ. ಇದರಲ್ಲಿ ಇನ್ನಷ್ಟು ಚುರುಕು ಸ್ವಭಾವವನ್ನು ತೋರಿಸಿ ಬಡ ಮೀನುಗಾರರ ಬಗ್ಗೆ ಒಂದು ಆದೇಶವನ್ನೋ ಅಥವಾ ಒಂದು ಆಶ್ವಾಸನೆಯನ್ನು ಕೊಟ್ಟು ಅವರ ನಿರಸನವನ್ನು ಮುಕ್ತಾಯಗೊಳಿಸುವಂಥ ರೀತಿಯಲ್ಲಿ ಒಂದು ಆದೇಶವನ್ನು ಹೊರಡಿಸಬೇಕು. ಈ ಬಗ್ಗೆ ಸೂಕ್ತವಾದ ಉತ್ತರವನ್ನು ಕೊಡಬೇಕು ಎಂದು ಮಾನ್ಯ ಅಧ್ಯಕ್ಷರ ಮುಖಾಂತರ ಕೇಳಿಕೊಂಡು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† SRI BLASIUS M. D'SOUZA (Mangalore),— Mr. Speaker Sir, we are very sorry to hear the reply from the Hon. Minister for PWD that the accidents were due to the rough sea. Earlier this port folio was held by Mr. Devegowda, then Mr. Rajvardhan, Mr. Byregowda, Mr. Krishna Reddy and Mr Raghupathy. All these five Ministers have not seen the sea there and the difficulties of fisher men. They have to work 18 hours a day. When they go to sea, their family members are not sure whether they will come back or not. We have been shouting in this House to raise the bars as well as the river bed Unfortunately the officers of the Department of Ports and Fisheries have been misguiding the Hon. Minister. If there were accidents in this sea due to rough sea in Mangalore, there were accidents in Malpe and other places also. These accidents were due to silting of the bars. When the fish boats come and touch

the stand, they collapse. During the last 5 years there have been 62 accidents incurring Rs. 1 crore 7 lakhs 73 thousand and 900 of loss to the fishermen due to the damage to the boats. We have been seeing that the Government in the 7 th Plan has sanctioned Rs. 12 5 crores.

Out of this 12·5 crores, 10 Crores have to be spent by the end of Seventh Five Year Plan. There is only one year left. Last time, when we spoke about Dredging, Mr. Raghupathy used to speak about 12.5 Crores. But the Government was not able to spend even 10 Crores. Last time, the Department has given contract to a private Company and that private Company had brought Dredger in the lorry. You can just imagine it is impossible to bring a Dredger in a lorry and dredge the rough sea as well as the river and the same contractor took away the Dredger. Actually that was not a dredger, that was a toy. On 12th December 1987, when the President of the Drudging Corporation of India, Mr. Abraham, had come to Mangalore, he said that when the work at the new Mangalore Port is over, he would Shift the Drdeger to the Old Mangalore Port and he was prepared to Dredge. Unfortunately, the Department has not taken any action. It is a well known fact that Mangalore Port is a very famous port, which has been there for centuries. From the last 50 years, there is an old Dredger in the Old Mangalore port which has not been used for the last 10 years. Even the Britishers know that there is necessity for dredging the river. After independence, unfortunately, we have seen that the Government has not taken any action. We have been asking the Central and State Governments in this connection, for the last five years, The Central Government has sanctioned 12.5 crores in the Seventh Plan and not a single Paise has been spent. From the 6 th or 7th of this month, the Fishermen are on strike and their demand has to be met with. When we raised this issue in the House, Hon'ble Chief Minister said that he would invite all the Legislators from the Coastal Area. Unfortunately, when we saw the newspaper, he has invited only one M.L.A. from Janata Party and one M.L.C., from Janata Party. I do not know why the Chief Minister did not have the courtesy to call all the M.L.As from the Coastal area. Had he invited us, we would have given him the picture as to what is happening and we would have given him the solution. Unfortunately he has not invited us and no Minister has visited the spot so far. I would request the Hon'ble Minister Mr. H. D. Devegowda to please come to Mangalore and hear the grievances of the Fishermen. Fishermen are on strik from the 7th of this month and if they don't get an assurance today from the Minister, it has been already reported in the Newspapers

that they are going to be violent. I would request the Minister to give them an assurance to start the break-waters. As Mr. Veerappa Moily pointed out, Rs. 60 lakhs has been spent for break-waters, technical sanction has been given, administrative sanction has been given and no more funds are required. The Department of Public Works can immediately start the work of Break-waters I would request the Honb'ble Minister to give an assurance that he will start the work of break-waters within a week or so. Regarding Fisheries, there is negligence on the part of the Government in respect of Dakshina Kannada district. We have been seeing/that whenever it comes to our District, there is step-motherly treatment. We find that normally in September or October, our Fishermen catch fish worth Rs. 20 crores out of the total worth of Rs. 40 to 50 crores caught in the entire year. But today they are frightened to go into the sea because when they come back many would be met with accidents. As Minister has stated, 15 boats have met with accident and three persons have died. I would request the Hon'ble Minister Mr. Devegowda to come to Mangalore immediately, I don t want any other Ministers to come. Only the Hon'ble Chief Minister or the concerned Minister Sri H. D. Devegowda must come immediately to Mangalore and give an aasurance to the Fishermen that they are going to take immediate action.

ಶ್ರೀ ಜೆ.ಎಸ್. ಆಚಾರ್.—ಸನ್ಮಾನ್ಯ ಅಧ್ಯಕ್ಷರೇ, ಜೀವದ ಹಂಗುತೊರೆದು ನಿರಂತರ ಬದುಕಿನ ಹೋರಾಟದಲ್ಲಿ ತೊಡಗಿರುವ ಮೀನುಗಾರರು ಅತ್ಯಂತ ಶಾಂತಿ ಸ್ವಭಾವದವರಾಗಿದ್ದು ಕಾನೂನಿಗೆ ಪನ್ನಣಿ ಕೊಡುವ ಜನರಾಗಿದ್ದಾರೆ. ಇವತ್ತು ಏನಾಗಿದೆ ಅಂದರೆ, ಕಳೆದ ಹತ್ತಾರು ವರ್ಷಗಳಿಂದ ಸರ್ಕಾರದ ಹಾಗೂ ಮಂತ್ರಿಗಳ ಆಶ್ವಾಸನೆಗಳನ್ನು ಕೇಳಿ ಕೇಳಿ ಅದು ಕಾರ್ಯಗತವಾಗದೆ, ಅವರ ಎದೆಯೊಳಗಿನ ನೋವಿನಿಂದ ಕಳೆದ ಒಂದು ವಾರದಿಂದ ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾಧಿಕಾರಿಗಳ ಕಛೇರಿಯ ಮುಂದೆ ಸಹಸ್ರಾರು ಜನರು ಧರಣಿ ಹೂಡುವಂತ ಪರಿಸ್ಥಿತಿ ಬಂದಿದೆ. ಇತ್ತೀಚೆಗೆ ಮಾನ್ಯ ಇದಿನಬ್ಬ ನವರು ಕೇಳಿದ ಪ್ರಶ್ನೆಗೆ ಸರ್ಕಾರದವರು ಉತ್ತರ ಕೊಟ್ಟಿದ್ದಾರೆ.

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಆದರೆ, ಕೆಲವಾರು ವರ್ಷಗಳಿಂದ ಪರ್ಸಿನ್ ಬೋಟುಗಳ ಯಾಂತ್ರೀಕೃತ ದೋಣಿಗಳ ಹ್ಯೂಮನ್ ಲೈಫ್ ಪರದಿ ಕುರಿತು, ಇನ್ಸೂರೆನ್ಸ್ ಕಂಪನಿಯು ರಿಪೋರ್ಟು ತೆಗೆದು ನೋಡಿದರೆ ಗೊತ್ತಾಗುತ್ತದೆ. ಇದರ ಪ್ರಕಾರ ೧೦೫,೧೪,೪೦೦ ರೂಪಾಯಿಗಳು ನಷ್ಟವಾಗಿದೆ. ೬೨ ದೋಣಿ ಮುಳುಗಿದ ಪ್ರಕರಣಗಳು ಇವೆ. ೧೦ ಸಾವು ಆಗಿದೆ. ಹೀಗೆ ನಿರಂತರವಾಗಿ ನಡೆಯುತ್ತಿರುವಾಗ ಅಲೆಗಳ ಪ್ರಕರಣದಿಂದ ಆಗಿದೆ ಎಂದು ಹೇಳಿದರೆ, ಇದನ್ನು ನಂಬುವುದಕ್ಕೆ ಆಗುವುದಿಲ್ಲ. ಹೂಳು ಎತ್ತುವುದನ್ನು ಸರಿಪಡಿಸದೇ ಇದನ್ನು ಸರಿ ಮಾಡುವುದಕ್ಕೆ ಆಗುವುದಿಲ್ಲ. ಇದರ ಬಗ್ಗೆ ಸರ್ಕಾರ ಮೊದಲು ಯೋಚನೆ ಮಾಡಿತ್ತು. ೮೬-೮೭ರಲ್ಲಿ ಆಯವ್ಯಯ ಮಂಡಿಸಿದ ಪತ್ರದಲ್ಲಿ ಹೂಳು ತೆಗೆಸುವ ಕಾರ್ಯಕ್ಕಾಗಿ ೧.೭೦ ಲಕ್ಷ ರೂಪಾಯಿಗಳನ್ನು ಮೀಸಲಾಗಿಟ್ಟಿತ್ತು. ೧೯೮೮ರ ಆಯವ್ಯಯದಲ್ಲಿ ಕೂಡ ೧.೪೫ ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿತ್ತು. ೮೪-೮೯ರ ಆಯವ್ಯಯದಲ್ಲಿ ಕೂಡ ೧ ೨೩ ಲಕ್ಷ ರೂಪಾಯಿಗಳನ್ನು ಮೀಸಲಿಡಲಾಗಿತ್ತು. ಇದರ ಜೊತೆಗೆ ೯೬-೪೭ರಲ್ಲಿ ಸುಮಾರು ೧೨.೫೦ ಕೋಟಿ ರೂಪಾಯಿಗಳನ್ನು ಇಟ್ಟು ಸುಮಾರು ೨೦೦ ಮೀಟರ್ ಉದ್ದದ, ಬ್ರೇಕ್ ವಾಟರ್

ಕೆಲಸ ಮತ್ತು ೪.೫ ಮೀಟರ್ ಉದ್ದದ ಅಲ್ಲಿಯ ಮಾರ್ಗದ ರಸ್ತೆಗಳನ್ನು ತೆಗೆದುಕೊಳ್ಳಲಾಗುವುದೆಂದು ಸರ್ಕಾರದವರು ಆಶ್ವಾಸನೆ ಕೊಟ್ಟಿರು. ಮಂಗಳೂರಿಗೆ ಮಾನ್ಯ ಮುಖ್ಯಮಂತ್ರಿಗಳು ಬಂದಾಗ ಅಲ್ಲಿನ ಶಾಸಕರುಗಳನ್ನು ಕರೆದು ಚರ್ಚೆ ಮಾಡುತ್ತಾರೆಂದು ಪತ್ರಿಕೆಗಳಲ್ಲಿ ಕೂಡ ವರದಿ ಬಂತು, ಆದರೆ, ಯಾರನ್ನೂ ಕರೆಯಲಿಲ್ಲ. ಆದರೆ, ಮೀನುಗಾರಿಕೆ ಮಂತ್ರಿಗಳು ಬಂದಾಗ ಶಾಸಕರುಗಳನ್ನು ಕರೆದುದ್ದು ಉಂಟು. ಒಂದು ತಿಂಗಳೊಳಗೆ ಈ ಕೆಲಸವನ್ನು ಮಾಡಲಾಗುವುದೆಂದು ವೀರಾವೇಶದಿಂದ ಎಡೆತಟ್ಟಿ ಹೇಳಿದ್ದು ಉಂಟು. ಈ ಮಾತನ್ನು ಅವರು ೧೯೮೭ರಲ್ಲಿ ಮಾಡುತ್ತೇವೆಂದು ಹೇಳಿದರು. ಆದರೆ ಈಗಿನ ಮಂತ್ರಿಗಳು ಹೇಳುತ್ತಾರೆ, that too, after a lapse of one year. Minister says that he will ask the Dredging Corporation of India.

ಅಧ್ಯಕ್ಷರು.—ಕಾಲಿಂಗ್ ಅಟೆನ್‌ಷನ್ ಅಂದರೆ ಏನು ಎಂದು ತಾವು ಅರ್ಥ ಮಾಡಿಕೊಂಡಿಲ್ಲ.

ಶ್ರೀ ಜಿ. ಎಸ್. ಆಚಾರ್.—ಮೊನ್ನೆ ಧರಣಿ ಕೂತ ಮೇಲೆ ಬಂದರು ನಿರ್ದೇಶಕರು ತಾಂತ್ರಿಕ ವರದಿಯನ್ನು ಪರಿಶೀಲಿಸಿದ ಹೊರತು ಕಾಮಗಾರಿ ಕೆಲಸ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲವೆಂದು ಹೇಳಿದ್ದಾರೆ. ಅಲ್ಲಿ ಉದ್ರೇಕ ಪರಿಸ್ಥಿತಿ ಇದೆ. ಅದನ್ನು ತಾವು ಅರ್ಥ ಮಾಡಿಕೊಳ್ಳಬೇಕು. ತಾಂತ್ರಿಕ ವರದಿಯನ್ನು ಪರಿಶೀಲಿಸುವುದಕ್ಕೆ ಇರುವ ತೊಂದರೆ ಏನು ? ಮೀನುಗಾರರ ಸಂಕಷ್ಟ ಏನು ಎನ್ನುವುದು ಸರ್ಕಾರಕ್ಕೆ ಗೊತ್ತಿಲ್ಲವೇ ?

ಅಧ್ಯಕ್ಷರು.—ವಿವರಣೆ ಕೇಳಿ.

ಶ್ರೀ ಜಿ.ಎಸ್. ಆಚಾರ್.—ಕೆಲವೊಂದು ಬೇಡಿಕೆಗಳ ಬಗ್ಗೆ ಮಾನ್ಯ ಸಚಿವರು ಉತ್ತರ ಹೇಳಿದರು. ಈಗ ಗಂಗೊಳ್ಳಿಯಲ್ಲಿ ಎರಡು ಬೋಟ್ ನೀರು ಪಾಲಾಗಿದೆ ಮತ್ತು ಮನುಷ್ಯರು ಸಾಯುತ್ತಿದ್ದಾರೆ. ಎಲ್ಲಾ ಬಂದರುಗಳಲ್ಲೂ ಇದೇ ರೀತಿಯಾಗುತ್ತಿದೆ. ಅಧ್ಯಕ್ಷರೆ, ತಾವು ಬೇಡ ಅಂದರೆ ನಾನು ಹೇಳುವುದಿಲ್ಲ.

ಅಧ್ಯಕ್ಷರು —ತಾವು ಹೇಳಿ ನಿಮಗಿಂತಲ್ಲೂ ಹೆಚ್ಚು ಇಂಟರೆಸ್ಟ್ ನನಗೆ ಇದೆ. ತಾವು ಹೇಳುವಾಗ ಸಮಯದ ಪ್ರಜ್ಞೆ ಇರಲಿ, ವಿಷಯದ ಪ್ರಜ್ಞೆ ಇರಲಿ. ತಾವು ಸರ್ಕಾರಕ್ಕೆ ವಿವರಣೆಯನ್ನು ಕೇಳಿ. ಭಾಷಣ ಮಾಡಿದರೆ ಹೇಗೆ ?

ಶ್ರೀ ಜಿ.ಎಸ್. ಆಚಾರ್.—ಅಧ್ಯಕ್ಷರೆ, ಇವರು ಬೀನ್ ನೋಡುತ್ತೇವೆ, ಮಾಡುತ್ತೇವೆ ಅಂದರೆ ಆಗುವುದಿಲ್ಲ. ಯಾವಾಗ ಆದರ ಕೆಲಸ ಪ್ರಾರಂಭ ಮಾಡುತ್ತಾರೆಂದು ಮಾನ್ಯ ಮಂತ್ರಿಗಳು ಹೇಳಬೇಕು, ಸರಿಯಾದಂಥ ಕೆಲಸವನ್ನು ಮಾಡಬೇಕು. ಆದರ ಬಗ್ಗೆ ಸರಿಯಾದಂಥ ಉತ್ತರವನ್ನು ಹೇಳಬೇಕು.

ಶ್ರೀ ಬಿ ಎಂ. ಇದಿನಬ್ಬ.—ಸನ್ಮಾನ್ಯ ಅಧ್ಯಕ್ಷರೇ, ನೂರಕ್ಕೆ ನೂರರಷ್ಟು ನನ್ನ ಕ್ಷೇತ್ರದಲ್ಲಿ ಈ ಸಮಸ್ಯೆ ಇರುವಂತಾದ್ದು. ಅಳಿವೆಬಾಗಿಲಿನ ಗಲಾಟೆಯ ಬಗ್ಗೆ ಕಳೆದ ಮೂರೂವರೆ ವರ್ಷದಿಂದ ನಾನು ಅಸೆಂಬ್ಲಿಯಲ್ಲಿ ಮೂರು ಪ್ರಶ್ನೆಗಳನ್ನು ಕೇಳಿದ್ದೆ. ಇದು ಮೀನುಗಾರರ ಡಿಪಾರ್ಟ್‌ಮೆಂಟಿನಲ್ಲಿದೆ ಎಂದು ಹೇಳಿದ್ದೆ, ಆದರೆ ಯಾವುದೂ ಆಗಲಿಲ್ಲ. ಹನ್ನೆರಡು ಬೋಟುಗಳು ೨೫ ಮತ್ತು ೨೯ನೇ ತಾರೀಖುಗಳಲ್ಲಿ ಮುಳುಗಿ ಹೋಗಿವೆ. ಮೂರು ಜನರು ಸತ್ತು ಹೋಗಿದ್ದಾರೆ. ಸಾಧಾರಣವಾಗಿ ೩೦ ಲಕ್ಷ ರೂಪಾಯಿ ನಷ್ಟವಾಗಿದೆ. ಆದ್ದರಿಂದ, ಹೂಳು ಎತ್ತುವ ಕೆಲಸವನ್ನು ಇವೊತ್ತೇ ತಾವು ಮಾಡಿಸುತ್ತೇವೆಂದು ಹೇಳಬೇಕು ಈಗ ಅಲ್ಲಿ ಮೀನುಗಾರರು ೮ ದಿವಸಗಳಿಂದ ಉಪವಾಸ ಮುಷ್ಕರದಲ್ಲಿದ್ದಾರೆ. ಇದರಿಂದ ನನಗೆ ಬಹಳ ಬೇಸರವಾಗಿದೆ. ನನ್ನ ಕ್ಷೇತ್ರದಲ್ಲಿ ಇಂತಹ ಅವಘಡ ಆಗುವಾಗ ಮೀನುಗಾರರ ಕಷ್ಟ ಸುಖ ವರ್ಣಿಸಬೇಕಾದ್ದಿಲ್ಲ. ಅಳಿವೆಬಾಗಿಲು ಅಂದರೆ ಮರಣದ ಕೂಪ. ಇದರ ಬಗ್ಗೆ ಯಾವರೀತಿ ವಿವರಿಸಬೇಕೆಂದು ಸರ್ಕಾರಕ್ಕೆ ಹೇಳಬೇಕಾಗಿಲ್ಲ. ನಮ್ಮ ಯಾವ ಅಧಿಕಾರಿಗಳೂ ಕೂಡ ಅಲ್ಲಿ ಧರಣಿ ಕುಳಿತವರಿಗೆ ಒಂದು ಸಮಾಧಾನ ಕೂಡ ಹೇಳಲಿಲ್ಲ. ಇನ್ನೂ ಮೂರು ನಾಲ್ಕು ವರ್ಷ ಆದರೂ ಆಗುವುದಿಲ್ಲ ಎಂದು ಧರಣಿ ಕುಳಿತವರ ಹತ್ತಿರ ಹೇಳುವಂತಾದ್ದು ಆದರೆ ಅವರಿಗೆ ಬೇಜಾರಾಗುವುದಿಲ್ಲವೆ ? ಇವೊತ್ತು ಧರಣಿ ಕುಳಿತಿರುವವರಿಗೆ ಬಹಳ ಬೇಜಾರಾಗುತ್ತಿದೆ. ಸನ್ಮಾನ್ಯ ದೇವೇಗೌಡರು ಎರಡು ಮೂರು ದಿವಸದಲ್ಲಿ ಮಂಗಳೂರಿಗೆ ಬಂದು ಧರಣಿ ಕುಳಿತಿರುವವರಿಗೆ

ಸಮಾಧಾನ ಮಾಡಿದರೆ ಖಂಡಿತವಾಗಿ ಒಳ್ಳೆಯದಾಗುತ್ತದೆ. ಇಲ್ಲದೇ ಹೋದರೆ ಇದು ವಿಕೋಪಕ್ಕೆ ಹೋಗುತ್ತದೆ. ಇವೊತ್ತು ಮೀನುಗಾರರ ಬಗ್ಗೆ ಬಹಳ ದುಃಖ ಆಗುತ್ತದೆ. ತಾವು ಬಂದರೆ ಒಳ್ಳೆಯ ಅಭಿಪ್ರಾಯ ಹೇಳಿ ಧರಣಿ ನಿಲ್ಲಿಸುವುದಕ್ಕೆ ಅನುಕೂಲವಾಗುತ್ತದೆ, ಹೂಳು ಎತ್ತುವ ಕೆಲಸ ಮಾಡಲಿಕ್ಕೆ ಆದೇಶ ಕೊಡಲಿಕ್ಕೆ ಸಾಧ್ಯ ಆಗುತ್ತದೆ. ಅಲ್ಲಿರತಕ್ಕ ಆಫೀಸರ್ ಹೇಳತಕ್ಕ ಮಾತಿನ ಒಳಗುಟ್ಟು ತಿಳಿದುಕೊಳ್ಳುವುದಕ್ಕೆ ತಮಗೆ ಅನುಕೂಲವಾಗುತ್ತದೆ. ಆದ್ದರಿಂದ, ಈ ಅಳಿವೆ ಬಾಗಿಲಿನಲ್ಲಿ ಬೋಟ್‌ಗಳು ನಾಶವಾಗುವಂತಾದು ಏನಿದೆ ಅದನ್ನು ನಿಲ್ಲಿಸಬೇಕೆಂದು ನಾನು ಸಂಬಂಧಪಟ್ಟ ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಸಭಾಧ್ಯಕ್ಷರೆ, ಮಾನ್ಯ ವೀರಪ್ಪ ಮೊಯಿಲಿಯವರು, ಮತ್ತು ಸನ್ಮಿತ್ರರು ಏನು ಹೇಳಿದ್ದಾರೆ ಇದರಲ್ಲಿ ಉತ್ಪ್ರೇಕ್ಷೆ ಇಲ್ಲ. ವಾಸ್ತವಾಂಶ ಇದೆ. ನಾನಂ ಇದರ ಬಗ್ಗೆ ತುಂಬಾ ಹೆಚ್ಚು ಉದ್ದವಾದ ಉತ್ತರ ಕೊಡಬೇಕಾದ ಪ್ರಮೇಯ ಇಲ್ಲ ಎಂದು ತಿಳಿದುಕೊಂಡಿದ್ದೇನೆ ಸಮಸ್ಯೆಯಲ್ಲಿ ಸತ್ಯಾಂಶ ಇದೆ, ಇಲ್ಲಿ ರಾಜಕಾರಣ ಮಾಡಬೇಕಾದ್ದು ಏನೂ ಇಲ್ಲ. ನಾನು ಇವೊತ್ತು ಮುಖ್ಯಮಂತ್ರಿಗಳ ಪರವಾಗಿ ಜವಾಬ್ದಾರಿಯಿಂದ ಉತ್ತರ ಕೊಡುತ್ತಿದ್ದೇನೆ. ೧೯೮೩ರ ಅಂತ್ಯ ಭಾಗದಲ್ಲಿ ನಾನು ಆ ಸ್ಥಳಕ್ಕೆ ಭೇಟಿ ಕೊಟ್ಟು ಅಲ್ಲಿರತಕ್ಕ ಪರಿಸ್ಥಿತಿಯನ್ನು ಪರಿಶೀಲನೆ ಮಾಡಿದ್ದೇನೆ. ಅಲ್ಲಿ ಜೀವನ್ಮರಣದ ಪ್ರಶ್ನೆ ಇದೆ. ಅವರ ವೃತ್ತಿಯನ್ನು ಬಿಟ್ಟು ಬೇರೆ ವೃತ್ತಿಯನ್ನು ಮಾಡಲಿಕ್ಕೆ ಮೀನುಗಾರರಿಗೆ ಆಗುವುದಿಲ್ಲ. ಅವರ ವೃತ್ತಿಯಿಂದಲೇ ಬದುಕಬೇಕಾಗುತ್ತದೆ. ಮೀನು ಹಿಡಿಯಲಿಕ್ಕೆ ಹೋಗಿ ತಮ್ಮ ಪ್ರಾಣ ಬಲಿ ಕೊಡುತ್ತಿದ್ದಾರೆ. ಮನೆಯಿಂದ ಹೋದವರು ಮನೆಗೆ ವಾಪಸ್ಸು ಬರುತ್ತಾರೆಂಬ ಗ್ಯಾರಂಟಿ ಇರುವುದಿಲ್ಲ. ನಾನು ಸುಮಾರಂ ಒಂದೂವರೆ ಗಂಟೆ ಕಾಲ ಆ ಸ್ಥಳದಲ್ಲಿ ನಿಂತು ದೋಣಿಗಳು ಹೇಗೆ ಬರುತ್ತವೆ, ಹೇಗೆ ಮೇಲಕ್ಕೆ ಹಾರುತ್ತೆ, ಈ ಕಾಂಪ್ಲಿಕ್ಸ್ ಎರಡೂ ಸೇರುವ ಕಡೆ ದೃಶ್ಯವನ್ನು ನಾನೇ ಕಣ್ಣಿಂದ ನೋಡಿದ್ದೇನೆ. ಇದರ ಮೇಲೆ ಒಂದು ನಿರ್ಣಯ ಮಾಡಿದೆವು. ತಾವು ಓದಿದ್ದೀರಿ. ಇದರಲ್ಲೇ ಅರ್ಥವಾಗುತ್ತದೆ, ೧೯೮೪ರಲ್ಲಿ ಒಂದು ಕೋಟಿ ರೂಪಾಯಿ ಹಣ ಖರ್ಚು ಮಾಡಬೇಕೆಂದು ಹೇಳಿ ನಿರ್ಣಯ ಮಾಡಿದ ಮೇಲೆ ಮಂತ್ರಿಗಳು ಬದಲಾವಣೆ ಆಗಿದ್ದಾರೆ. ನಮ್ಮ ಈಗಿನ ವ್ಯವಸ್ಥೆಯಲ್ಲಿ ಇದೆಲ್ಲಾ ಆಗುತ್ತದೆ ನಾನು ಮೀನು ನೋಡಿದ್ದೇನೆ, ತಿಂದಿದ್ದೇನೆ. ಹತ್ತು ವರ್ಷಗಳಿಂದ ಈಚೆಗೆ ಬಿಟ್ಟಿದ್ದೇನೆ. ಆದರೆ ಇಷ್ಟು ಮಾತ್ರ ಹೇಳುತ್ತೇನೆ, ಇದನ್ನು ಕೇಂದ್ರ ಸರ್ಕಾರ ಪ್ರಾರಂಭ ಮಾಡಿದ್ದಾರೆ. ಹಿಂದೆ ನೀವು ಕೂಡ ಮಾಡಿದ್ದೀರಿ, ಈ ಆರ್ಡರ್‌ನಲ್ಲಿ ಇದೆ. ಮೀನುಗಾರರ ಸಮುದಾಯಗಳಿಂದ ಬಂದ ಅನೇಕ ಮನವಿಗಳನ್ನು ಪರಿಶೀಲಿಸಬೇಕೆಂಬ ಉದ್ದೇಶ ೧೯೮೦ ರಲ್ಲಿ ಸೇರಿದ ಸಭೆಯಲ್ಲಿ, ಈ ಬಂದರಿನಲ್ಲಿ ಬದಗಿಸಬೇಕಾದ ಅವಶ್ಯಕ ಅಭಿವೃದ್ಧಿ ಕೆಲಸಗಳನ್ನು ಒಳಗೊಂಡ ಯೋಜನಾ ವರದಿಯನ್ನು ತಯಾರಿಸಬೇಕೆಂದು ತೀರ್ಮಾನಿಸಲಾಯಿತು. ಸಣ್ಣ ಮಧ್ಯವರ್ತಿಗಳ ಬಂದರುಗಳ ಅಭಿವೃದ್ಧಿಗಳಿಗಾಗಿ ಕೇಂದ್ರ ಹಣ ಸಹಾಯ ಒದಗಿಸುವುದಿಲ್ಲವೆಂಬ ಕೇಂದ್ರ ಸರ್ಕಾರದ ಮತ್ತು ಯೋಜನಾ ಆಯೋಗದ ತೀರ್ಮಾನದಿಂದಾಗಿ ರಾಜ್ಯ ಸರ್ಕಾರವು ಹಳೇ ಮಂಗಳೂರು ಅಭಿವೃದ್ಧಿ ಕೆಲಸದ ರಾಜ್ಯವಿಭಾಗದ, ಅಂದರೆ ಸ್ಟೇಟ್ ಸೆಕ್ಟರ್‌ನಲ್ಲಿ ಇದಕ್ಕೆ ಕೇಂದ್ರ ಸರ್ಕಾರ ಹಣ ಕೊಡುವುದಿಲ್ಲ. ಇದರಿಂದ ನಾವೇ ಒಂದು ನಿರ್ಣಯವನ್ನು ಮಾಡಿಕೊಂಡಿದ್ದೆವು. ಅದು ಏನೇ ಇರಲಿ, ಆ ನಿರ್ಣಯ ಕೇವಲ ಕಾಗದದ ಮೇಲಿದ್ದರೆ ಏನೂ ಪ್ರಯೋಜನ ಆಗುವುದಿಲ್ಲ ಅದು ಕಾರ್ಯಗತವಾಗಬೇಕು. ಅವರು ಪ್ರಾಮಾಣಿಕ ಪ್ರಯತ್ನವನ್ನು ನಡೆಸಿದ್ದಾರೆ. ನನ್ನ ಸ್ನೇಹಿತರು ಬೇರೆ ಖಾತೆಗಳಿಗೆ ಹೋದ ಮೇಲೆ ಅವರು ಕಡಿಮೆ ಪ್ರಯತ್ನವನ್ನು ಮಾಡಿದ್ದಾರೆಂದು ನಾನು ಅಂದುಕೊಳ್ಳುವುದಿಲ್ಲ. ಅವರು ಸಾಕಷ್ಟು ಪ್ರಯತ್ನವನ್ನು ನಡೆಸಿದ್ದಾರೆ ಅಮೀನ್ ರವರು ಆದರ ಅಧ್ಯಕ್ಷರಾಗಿದ್ದರು. ಈಗ ಅವರು ಇದ್ದಾರೋ, ಇಲ್ಲವೋ ನನಗೆ ಗೊತ್ತಿಲ್ಲ. ಹಿಂದೆ ನಾನು ಹೋದಾಗ ಅವರು ಇದ್ದರು. ಮೀನುಗಾರರ ಕೋ-ಆಪರೇಟಿವ್ ಸೊಸೈಟಿಯ ಅಧ್ಯಕ್ಷರಾಗಿದ್ದವರು ಹಿಂದೆ ಈ ಸದನದ ಸದಸ್ಯರಾಗಿದ್ದವರು. ಈಗ ಅವರು ಎಕ್ಸ್ ಎಂ.ಎಲ್.ಎ., ಆಗಿದ್ದಾರೆ. ಅವರ ನೇತೃತ್ವದಲ್ಲಿ ಸರ್ಕಾರ ಒಂದು ಸಮಿತಿಯನ್ನು ಮಾಡಿತ್ತು. ಅದರಲ್ಲಿ ೩ ಜನ ಸದಸ್ಯರಿದ್ದಾರೆ ಅವರ ಪೈಕಿ ಅಮೀನ್‌ರವರೂ ಒಬ್ಬರು. ಅವರು ಕೇರಳಕ್ಕೆ ಹೋದರು. ಅವರನ್ನು ಕೇಳಿದರೆ ಸಾಧ್ಯವಾಗಬಹುದೆಂದು ಡೈರೆಕ್ಟರ್ ಆಫ್ ಫೋರ್ಟ್ಸ್, ಕೆ ಸಿ. ಸುಂದರ್, ಡಿ ಕೋಟ್ಯನ್ ಇವರೆಲ್ಲರೂ ಪರ್ಸನಲ್ ಆಗಿ ಕೇರಳಕ್ಕೆ ಹೋದರು. ಕೇರಳ ಸರ್ಕಾರದಿಂದ ತರುವುದಕ್ಕೆ ಪ್ರಯತ್ನ ಮಾಡಿದರು. ಆದರೆ ಸಿಕ್ಕಲಿಲ್ಲ. ಆನಂತರ ಏನೇನು ಆಯಿತು ಎನ್ನುವ ಬಗ್ಗೆ ಎಲ್ಲ ವಿವರಗಳೂ ಇವೆ. ಟೆಂಡರ್‌ನ್ನು

ಕರೆದಿದ್ದರು. ಅನಂತರ ಸಮಿತಿಯಲ್ಲಿ ಕೂತು ನಿರ್ಣಯವನ್ನು ಮಾಡಿದ್ದಾರೆ. ಅದರಲ್ಲಿ ಯಾವ ಪಾರ್ಟಿ, ಪಕ್ಷ ಎಂಬ ವಿವರಣೆಯನ್ನು ಕೊಡಬೇಕಾಗಿಲ್ಲ. ಅದರ ಅವಶ್ಯಕತೆ ಇಲ್ಲ. ಆದರೆ ಒಂದು ದುರ್ದೈವ ಎಂದರೆ ಡ್ರೆಡ್ಜಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾದವರೂ ಕೂಡ ತಮ್ಮ ಅಸಹಾಯಕತೆಯನ್ನು ತೋರಿಸಿಕೊಂಡಿದ್ದಾರೆ. ಅದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

> "The Dredging Corporation of India authorities in their letter indicated that in view of the non-availability of the right type of dredger, they are fabricating a bed leveller type of equipment to take up dredging and they have asked the concurrence of the Department."

ಪರಿಸ್ಥಿತಿ ಏನಾಗಿದೆ ಎಂದರೆ, ಯಾರೋ ಒಬ್ಬ ಆಫೀಸರ್ ರಿಟೈರ್ ಆದ ಎನ್ನತಕ್ಕ ಪ್ರಶ್ನೆ ಬೇಡ. ನೀವು ಯಾವ ಕಂಪೆನಿಯಿಂದ ಮಾಡಿಸಬೇಕೆಂದು ಹೇಳುತ್ತಿದ್ದೀರಿ ಅದಕ್ಕೂ ಸರ್ಕಾರದ ಯಾವುದೇ ನೀತಿಯನ್ನಾಗಲಿ ಸಡಿಲ ಮಾಡಿದನ್ನು ಮಾಡಿಸುತ್ತೇವೆಂದು ನಾನು ಸರ್ಕಾರದ ಪರವಾಗಿ ಹೇಳುತ್ತಿದ್ದೇನೆ. ನಾನು ಆ ಖಾತೆಯ ಮಂತ್ರಿಯಲ್ಲದಿದ್ದರೂ. I assure the House that we are prepared to relax any conditions. ಈ ಸದನವನ್ನು ವಿಶ್ವಾಸಕ್ಕೆ ತೆಗೆದುಕೊಂಡೇ ಈ ಕೆಲಸವನ್ನು ಮಾಡಬೇಕಾಗುತ್ತದೆ. ಇದರಲ್ಲಿ ಪಕ್ಷ-ಪಂಗಡದ ಪ್ರಶ್ನೆ ಇಲ್ಲ. ಇದು ಜನರ ಸಮಸ್ಯೆ. ಅದು ಡ್ರೆಡ್ಜಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾ ಇರಲಿ, ಅಥವಾ ಪ್ರೈವೇಟ್ ಕಂಪೆನಿ ಇರಲಿ ಯಾವುದೇ ಇರಲಿ ಸರ್ಕಾರದ ನೀತಿಯನ್ನು ಎಷ್ಟು ಸಡಿಲ ಮಾಡುವುದಕ್ಕೆ ಸಾಧ್ಯವೋ ಅಷ್ಟನ್ನೂ ಮಾಡಿ ಈ ಕೆಲಸವನ್ನು ನಾವು ಮಾಡಿಸುತ್ತೇವೆ, ಬೇಕಾದರೆ ಇವತ್ತೋ ನಾಳೆಯೋ, ನಾವೂ, ನೀವೂ ಸೇರಿ ಮೂರ್ತ ಮಾಡಿ ಚರ್ಚೆ ಮಾಡೋಣ. ನೀವು ಕೊಡತಕ್ಕ ಸಲಹೆಗಳನ್ನು ನಾವು ಒಪ್ಪಿಕೊಳ್ಳುತ್ತೇವೆ. ಆದರೆ ಇಷ್ಟು ಮಾತ್ರ ಹೇಳುತ್ತೇನೆ, ಇದಕ್ಕೆ ಕೇಂದ್ರ ಸರ್ಕಾರ ಹಣವನ್ನು ಕೊಡುವುದಿಲ್ಲ. ನಮ್ಮಲ್ಲಿರತಕ್ಕ ೮-೧೦ ಸಣ್ಣಪುಟ್ಟ ಬಂದರುಗಳೇನಿವೆ. ಅವುಗಳ ಅಭಿವೃದ್ಧಿಗೆ ಕೇಂದ್ರ ಸರ್ಕಾರದವರು ಹಣವನ್ನು ಕೊಡುವುದಿಲ್ಲ. ಅವುಗಳ ಅಭಿವೃದ್ಧಿಗೆ ನಾವೇ ಹಣವನ್ನು ಖರ್ಚುಮಾಡಿ ಮಾಡಿಸಿಕೊಳ್ಳಬೇಕಾಗುತ್ತದೆ. ನಾವೇ ಅದಕ್ಕೆಲ್ಲಾ ಯೋಜನೆಗಳನ್ನು ಆಳವಡಿಸಿಕೊಂಡು ವ್ಯವಸ್ಥೆ ಮಾಡಿದ್ದೇವೆ. ಇದರ ಜೊತೆಗೆ ಕೇಂದ್ರ ಸರ್ಕಾರ ಕನ್ಸಲ್ಟೆನ್ಸಿ ಏಜೆನ್ಸಿ ರೈಟ್ಸ್ ಎಂದು ಮಾಡಿಕೊಂಡು ಅದಕ್ಕೆ ಕೆಲಸವನ್ನು ಎಂಟ್ರಸ್ಟ್ ಮಾಡಿದ್ದಾರೆ. ಅದು ಏನೇ ಇರಲೀ, ಈ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಏನು ಪ್ರಯತ್ನ ಮಾಡಬೇಕೋ ಅದನ್ನು ಪ್ರಾಮಾಣಿಕವಾಗಿ ಮಾಡೋಣ. ಇನ್ನು ಬ್ರೇಕ್ ವಾಟರ್ ಮಾಡುವುದಕ್ಕೆ ಹಣವನ್ನು ಖರ್ಚು ಮಾಡತಕ್ಕ ವಿಚಾರವನ್ನು ಹೇಳಿದರು. ಟೋಟಲ್ ಕಾಂಪೊನೆಂಟ್‌ಗೆ ಒಂದು ಎಸ್ಟಿಮೇಟ್ ಮಾಡಿದ್ದಾರೆ ಆದರೆ ಬಿಡಿ ಬಿಡಿ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವೇ ಎಂದು ನೋಡಬೇಕಾಗಿದೆ. ಒಂದುವೇಳೆ ಸಾಧ್ಯವಿದ್ದರೆ ಅದನ್ನು ಯಾವ ಏಜೆನ್ಸಿಗೆ ಕೊಡಬೇಕೆಂದು ತಾವು ಹೇಳಿದ್ದೀರಿ ಅದನ್ನು ಹೊರತಾಗಿ ತೆಗೆದುಕೊಳ್ಳುವುದು ಸಾಧ್ಯವಿದ್ದರೆ I will examine. ಡ್ರೆಡ್ಜಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾದವರ ಜೊತೆ ವ್ಯವಹರಿಸುತ್ತೇವೆ. ನಮ್ಮ ಸೆಕ್ರೆಟರಿಯವರೂ ಕೂಡ he is holding the additional charge. The regular Secretary has gone abroad. ಅವರಿಗೂ ಕೂಡ ಇದರ ಬಗ್ಗೆ ಪೂರ್ಣ ವಿವರ ಗೊತ್ತಿಲ್ಲ.

೮೦-೫೦ ಎ. ಎಂ.

ನಾನು ಮಾನ್ಯಮಂತ್ರಿಗಳ ಪರವಾಗಿ ಉತ್ತರ ಕೊಡುತ್ತಿದ್ದೇನೆ. ೬೦ ಕೋಟಿಯನ್ನು ಬ್ರೇಕ್‌ವಾಟರ್ ಸ್ಕೀಮ್ಸ್‌ಗೆ ತೆಗೆದುಕೊಳ್ಳಲು ಸಾಧ್ಯವಾದರೆ ಈ ವಿಷಯದಲ್ಲಿ ಸರ್ಕಾರ ಪ್ರಾಮಾಣಿಕವಾಗಿ ಪ್ರಯತ್ನ ಮಾಡುತ್ತದೆಂದು ಹೇಳಲಿಕ್ಕೆ ಇಚ್ಛಿಸುತ್ತೇನೆ. ತೆಗೆದುಕೊಳ್ಳಲು ಸಾಧ್ಯವಾದರೆ ತೆಗೆದುಕೊಳ್ಳಲು ನಿರ್ಣಯ ಮಾಡೋಣ. ಸ್ವಲ್ಪ ವಂಟ್ಟಿಗೆ ಹಣದ ಕೊರತೆ ಇದೆ. ಅದರ ವಿಷಯ ಬೇರೆ ಏನಾದರೂ ಆಗತಕ್ಕಂಥ ಅನಾಹುತ ತಪ್ಪಿಸುವುದಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಸೂಕ್ಷ್ಮವಾಗಿ ಹೇಳುತ್ತೇನೆ ಮಾನ್ಯ ಆಚಾರ್‌ರವರು ಹೇಳಿದಹಾಗೆ ಇದು ಕಳೆದ ಐದು ವರ್ಷಗಳ ಪ್ರಶ್ನೆಯಲ್ಲ, ವರ್ಷಾಂತರಗಳಿಂದ ಬಂದಿರತಕ್ಕಂಥ ಪ್ರಶ್ನೆ. ತಲತಲಾಂತರವಾಗಿ ಬಂದಿರತಕ್ಕಂಥ ಪ್ರಶ್ನೆ

ಎಂದು ಅವರು ಹೇಳಿದರು ಮರಣಾಂತ ಕೂಪವೆಂದು ಹೇಳಿದರು. ನಾನು ಕೂಡ ನೋಡಿದ್ದೇನೆ. ಈ ಮಧ್ಯೆ ನಾನಾದರೂ ಹೇಳುವುದು ಇಷ್ಟೇ, ಹಣದ ಕೊರತೆ ಏನು ಇದೆ ಅದಕ್ಕೆ ವಿಶೇಷವಾಗಿ ಸ್ವಲ್ಪ ಮಟ್ಟಿಗೆ ಈ ವರ್ಷ ಇಷ್ಟೇ ಹಣವನ್ನು ಖರ್ಚುಮಾಡಲಿಕ್ಕೆ ಸಾಧ್ಯವೆಂದು ಹೇಳಲಿಕ್ಕೆ ನನಗೆ ಸ್ಥೈರ್ಯವಿಲ್ಲ ಭದ್ರ ನೆಲಗಟ್ಟಿನ ಮೇಲೆ ನಿಂತು ಹೇಳಲಿಕ್ಕೆ ಸಾಧ್ಯವಿಲ್ಲ. ಆದರೆ ಇದಕ್ಕೆ ಎಷ್ಟು ಪ್ರಾವಿಷನ್ ಮಾಡಿದ್ದಾರೆ ಅಷ್ಟು ಹಣ ಖರ್ಚು ಮಾಡುವುದಕ್ಕೆ ಸಾಧ್ಯವೇ ಎನ್ನುವ ಬಗ್ಗೆ ವಿಚಾರ ಮಾಡುತ್ತೇನೆ ಇಂದು ನಾವು ಈ ಸದನದ ಕೊನೆಯ ದಿವಸದಲ್ಲಿರುತ್ತೇವೆ. ಆದ್ದರಿಂದ ಏನು ಹೇಳಬೇಕೆಂಬುದು ಗೊತ್ತಾಗುತ್ತಿಲ್ಲ ಒಂದು ವಿಷಯ ಹೇಳುವುದಾದರೆ ಹಿರಿಯ ಅಧಿಕಾರಿಗಳ ಜೊತೆಯಲ್ಲಿ ಚರ್ಚೆಮಾಡಿ ನಿರ್ಣಯ ಮಾಡುತ್ತೇನೆ. ನಿರ್ಣಯ ಮಾಡುವಾಗ ತಮ್ಮನ್ನು ಕರೆದು ಚರ್ಚೆ ಮಾಡೋಣ. ಇಪತ್ತು ಇದನ್ನು ಯಾರಿಗೆ ಕೊಡಬೇಕು, ಯಾವ ಕಂಪನಿಗೆ ಕೊಡಬೇಕು ಎನ್ನುವುದು ಪ್ರಶ್ನೆ ಇರುತ್ತದೆ. ಡ್ರೆಡ್ಜಿಂಗ್ ಕಾರ್ಪೊರೇಷನ್, ಮತ್ತೆ ಪ್ರೈವೇಟ್ ಏಜೆನ್ಸಿಯೂ ಕೂಡ ಇದೆ ತಾವು ಹೇಳತಕ್ಕಂಥದ್ದು ಕೇರಳ ಗೌವರ್ನಮೆಂಟ್ ಸಂಸ್ಥೆ ಇದೆ ಎಂದು. ಅದು ಒಳ್ಳೆಯ ಸಂಸ್ಥೆಯಾಗಿದೆ ಎಂದು ತಾವು ಹೇಳಿದಿರಿ. ಅದರ ಕೆಲಸ ನೋಡಿಲ್ಲ. ಆದರೆ ಕೇಳಿದ್ದೇನೆ. ತಾವು ಯಾವ ರೀತಿ ಸಲಹೆಯನ್ನು ಕೊಡುತ್ತೀರಿ ಮತ್ತು ಯಾವ ರೀತಿ ನಿರ್ಣಯ ಕೊಡುತ್ತೀರಿ ಅದರಂತೆ ಕೆಲಸ ಮಾಡುತ್ತೇವೆ.

ಶ್ರೀ ಎಂ. ವೀರಪ್ಪಮೊಯಿಲಿ —ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಇದರಲ್ಲಿ ಮೂರರಿ ಭಾಗ ಮಾಡಿ ಹೇಳಿದರು, ಡ್ರೆಡ್ಜಿಂಗ್ ಮಾಡುವ ಬಗ್ಗೆ ಡ್ರೆಡ್ಜಿಂಗ್ ಕಾರ್ಪೊರೇಷನ್‌ರವರು ಒಂದೂವರೆ ವರ್ಷದ ಹಿಂದೆಯೇ ಹೇಳಿದ್ದಾರೆ. ನಾವು ಮಾಡುತ್ತೇವೆಂದು ಹೇಳಿದ್ದಾರೆ. ಆದರೆ ನಮ್ಮ ಸರ್ಕಾರದ ವರು ಏನೂ ಆಕ್ಟ್ ಮಾಡಲಿಲ್ಲ. You pay advance to them. They are prepared to start work within one or two months. ಯಾವುದೇ ಏಜೆನ್ಸಿಯ ಬಗ್ಗೆ ನಮ್ಮ ಸಜೆಷನ್ ಪಂಖ್ಯಿ ಪ್ರಶ್ನೆಯಲ್ಲ Dredging Corporation is prepared to handle this. Only thing is. if you could send one senior officer to their headquarters in Bombay and entrust the work and come back ಸಾಧ್ಯವಿದ್ದರೆ ಮಾಡಿ. ಎರಡನೆಯದಾಗಿ ಬ್ರೇಕ್ ವಾಟರ್ ಬಗ್ಗೆ ಸಪರೇಟ್ ಕಾಂಪೊನೆಂಟ್ ಇದೆ ಕಳೆದ ಬಜೆಟ್‌ನಲ್ಲಿ ೩ ಕೋಟಿ ೭೦ ಲಕ್ಷ ರೂಪಾಯಿಗಳನ್ನು ಇಟ್ಟಿರುವುದಾಗಿದೆ. ಈಗ ಇಟ್ಟಿರತಕ್ಕಂಥದ್ದು ೧೯೮೭-೮೮ರ ಬಜೆಟ್‌ನಲ್ಲಿ ಒಂದು ಕೋಟಿ ಇಪ್ಪತ್ತು ಲಕ್ಷ ರೂಪಾಯಿಗಳು ಅಂದರೆ ೨.೨೦ ಕೋಟಿ ರೂಪಾಯಿಗಳು ಇದಿಷ್ಟು ಮಂಗಳೂರಿಗಾಗಿಯೇ ಖರ್ಚುಮಾಡಿಲ್ಲ. ಈಗ ೧೯೮೮-೮೯ರಲ್ಲಿ ೩.೭೦ ಕೋಟಿ ರೂಪಾಯಿಗಳನ್ನು ಇಟ್ಟಿರುವುದು, ಇದು ಬೇರೆ ಕೆಲಸಗಳಿಗೆ ಉಪಯೋಗವಾಗಿರಬಹುದು. ಬ್ರೇಕ್ ವಾಟರ್‌ಗೆ ಸಂಬಂಧ ಪಟ್ಟಂತೆ ಸಪರೇಟ್ ಕಾಂಪೊನೆಂಟ್ ಇದೆ. ನಾವು ಟೆಕ್ನಿಕಲ್ ಅಪ್ರೂವಲ್ ೧೦-೧೫ ದಿವಸಗಳಲ್ಲಿಯೇ ಕೊಟ್ಟು ಆದನ್ನು ಮಾಡಲಿಕ್ಕೆ ಆಗುತ್ತದೆ. ಅದಕ್ಕಿಂತ ಹೆಚ್ಚಾಗಿ ಮುಖ್ಯರ ಕುಳಿತಿರತಕ್ಕಂಥವರ ಬಗ್ಗೆ ಹೇಳುವುದಾದರೆ ಇದು ೫ ವರ್ಷಗಳಿಂದಲೂ ನಡೆಯುತ್ತಿರುವ ವಿಚಾರ. ತಾವು ಮಂಗಳೂರಿಗೆ ಬನ್ನಿ ನಾಳೆ ಅಂದರೆ ಭಾನುವಾರ ವಿಮಾನವಿರುವುದಿಲ್ಲ. ನಾಳಿದ್ದು ಸೋಮವಾರ ಬನ್ನಿ. ತಾವು ಹಿರಿಯ ಸದಸ್ಯರಿದ್ದೀರಿ. ತಮ್ಮ ಮಾತಿನ ಮೇಲೆ ಸಂಪೂರ್ಣವಾಗಿ ಮಾನುಗಾರರಿಗೆ ನಂಬಿಕೆ ದೆ. ತಾವು ಆಶ್ವಾಸನೆಯನ್ನು ಕೊಟ್ಟು ಬ್ರೇಕ್ ವಾಟರ್ ಬಗ್ಗೆ ಇನ್ನು ಒಂದು ತಿಂಗಳಲ್ಲಿಯೇ ಕೆಲಸ ಮಾಡಿ ಮುಗಿಸಿಕೊಡುತ್ತೇವೆಂದು ಹೇಳಿ There is a provision of 3.70 crores in the budget itself for the old bar At least a crore and old can be provided for break waters. ದಯವಿಟ್ಟು ಆಷ್ಟಾದರಮಟ್ಟಿಗೆ ಕಾರ್ಯಕ್ರಮವನ್ನು ತೆಗೆದು ಕೊಳ್ಳಬೇಕು. ಅದರ ಬಗ್ಗೆ ಶಾಸಕರ ಮಿಟಿಂಗ್ ಕರೆಯಬೇಕು. ಈಗಾಗಲೇ ಮಿಟಿಂಗ್ ಪ್ರೋಸಸ್ ಎಲ್ಲ ಮುಗಿದಿದೆ. ಯಾರಿಗೂ ಯಾವುದೂ ಉಳಿದಿಲ್ಲ. It is for the Government to act.

ಒಬ್ಬ ಮಾನ್ಯ ಸದಸ್ಯರು ಹೆಲಿಕ್ಯಾಪ್ಟರ್ ತೆಗೆದುಕೊಂಡು ಇಂದೇ ಹೋಗಬಹುದಲ್ಲ

ಶ್ರೀ ಪೆಚ್. ಡಿ. ದೇವೇಗೌಡ.—ನನಗೆ ಹೆಲಿಕ್ಯಾಪ್ಟರ್‌ನ ಅವಶ್ಯಕತೆ ಇಲ್ಲ. ದೇವರು ಒಳ್ಳೆಯ ಆರೋಗ್ಯವನ್ನು ಕೊಟ್ಟಿದ್ದಾನೆ. ಈ ಸದನದ ಗಮನಕ್ಕೆ ತರಬಯಸುವುದೇನೆಂದರೆ, I will read out a letter dated 14-9-88

"The dredging corporation has tried its level best to locate a suitable dredger to dredge the old Mangalore Bar inspite of tendering all round the country. We could not identify suitable equipment."

ಆನಾದರಣೆ ಅಥವಾ ಉದಾಸೀನ ಎಂಬ ಪ್ರಶ್ನೆ ಇಲ್ಲ. ಪ್ರಾಮಾಣಿಕವಾಗಿ ಅವರಿಗೆ ನೋವಿದೆ. ಇದರಲ್ಲಿ ಉತ್ಪ್ರೇಕ್ಷೆ ಇಲ್ಲವೆಂದು ನಾನು ಮೊದಲೇ ಹೇಳಿದ್ದೇನೆ. ಸತ್ಯಾಂಶ ಇದೆ. ನಾನು ನಾಳೆ ಡೆಲ್ಲಿಗೆ ಹೋಗುತ್ತಿದ್ದೇನೆ. ಮಾಟರ್ ರಿಸೋರ್ಸಸ್ ವಿನಿಸ್ಟರ್ ಅನ್ನು ಭೇಟಿ ಮಾಡುವುದಕ್ಕೆ ಅಪಾಯಿಂಟ್‌ಮೆಂಟ್ ಕೊಟ್ಟಿದ್ದಾರೆ. ೨೭ರ ಸುಪ್ರೀಂ ಕೋರ್ಟ್ ಡಿಸಿಷನ್‌ನ ಪರಿಸ್ಥಿತಿ ಏನು ಎಂಬ ಬಗ್ಗೆ ಚರ್ಚಿಸುವುದಕ್ಕೆ ಹೋಗುತ್ತಿದ್ದೇನೆ. ೧೮ಕ್ಕೆ ಬರುತ್ತೇನೆ. ೧೯ ಮತ್ತು ೨೦ ರಂದು ಇಲ್ಲಿ ವಿಜಯದಶಮಿಯ ಕಾರ್ಯಕ್ರಮ ಇದೆ. ಅಂದು ಉಪ ರಾಷ್ಟ್ರಾಧ್ಯಕ್ಷರು ಬರುತ್ತಾರೆ. ನಾನು ಅಲ್ಲಿಗೆ ಬರಬೇಕೆಂದರೆ ಎಷ್ಟು ಶೀಘ್ರವಾಗಿ ಬರಲಿಕ್ಕೆ ಸಾಧ್ಯ ಅಷ್ಟು ಶೀಘ್ರವಾಗಿ ಬರಲಿಕ್ಕೆ ಪ್ರಯತ್ನಿಸುತ್ತೇನೆ.

ಶ್ರೀ ಧರ್ಮಸಿಂಗ್.—ಹೇಗೂ ಹಾಸನಕ್ಕೆ ಹೋಗುತ್ತೀರಲ್ಲ... .

ಶ್ರೀ ಹೆಚ್. ಡಿ. ದೇವೇಗೌಡ.—ನಾನು ಬರುವುದಿಲ್ಲವೆಂದು ಹೇಳಿಲಿಲ್ಲ ಸಮಸ್ಯೆಯನ್ನು ಬಗೆಹರಿಸ ತಕ್ಕದ್ದರ ಬಗ್ಗೆ ಏನೆಲ್ಲ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯ ಅದೆಲ್ಲವನ್ನು ತೆಗೆದುಕೊಳ್ಳುತ್ತೇನೆ. ಬಾಂಬೆಗೆ ಅಧಿಕಾರಿಗಳನ್ನು ಕಳುಹಿಸಿ ಅಂದರು ಬೇಕಾದರೆ ನಾಳೆ ಬೆಳಿಗ್ಗೆ ಹೋಗಿ ಎಂದು ಹೇಳುತ್ತೇನೆ, ಆದರೆ ಇಲ್ಲಿ ಪ್ರಶ್ನೆ ಅದಲ್ಲ ಬಂಗಾರಪ್ಪನವರಿಗೆ ಒಂದು ತಪ್ಪಾಷೆ ಮಾಡಿದೆ. ಶರಾವತಿ ಯೋಜನೆಗೆ ಲಾಂಚನ ಹಾಕುವುದರ ಬಗ್ಗೆ ಸದನವನ್ನು ಮುಗಿಸಿಕೊಂಡು ಹೋಗುವುದರೊಳಗೆ ಆ ಕೆಲಸವನ್ನು ಮುಗಿಸುತ್ತೇನೆಂದು ಹೇಳಿದೆ. ಅವರು ಆಗುವುದಿಲ್ಲವೆಂದರು ನನಗೆ ಮಾಗ್ನಿಟ್ಯೂಡ್ ಆಫ್ ವರ್ಕ್ ಏನೆಂದು ಗೊತ್ತಿಲ್ಲದೆ ಹೇಳಿದೆ. ಆಗ ಅಧಿಕಾರಿಗಳು ಹೇಳಿದರು, ಸುಮ್ಮನೆ ಕಮಿಟ್ ಮಾಡಿ ಕೊಂಡ್ರಲ್ಲ ಎಂದು ಒಟ್ಟಿನಲ್ಲಿ ಕೆಲಸ ಮುಗಿಸಿದೆವು. ಬಂಗಾರಪ್ಪನವರು ಹೇಳಿದ್ದರು ನೀವು ಹೋಗುವುದಿಲ್ಲವೆಂದು, ಸರ್ಕಾರಕ್ಕೆ ಮನಸ್ಸು ಇದ್ದರೆ ಮಾಡುವುದಕ್ಕಾಗುತ್ತದೆ. ಅಂದಾಕ್ಷಣ ಇಲ್ಲವೆಂದು ಅಲ್ಲ It is a purely technical and sophisticated issue. ನಾನು ಎಷ್ಟರಮಟ್ಟಿಗೆ ಸರ್ಕಾರದ ಪತಿಯಿಂದ ಕ್ರಮ ಕೈಗೊಳ್ಳಬೇಕೋ ಅದನ್ನು ಕಾಲ ವಿಳಂಬವಾಗದ ರೀತಿಯಲ್ಲಿ ಏನೇನು ಮಾಡುವುದಕ್ಕೆ ಸಾಧ್ಯವಿದೆ ಅದನ್ನು ಮಾಡುತ್ತೇನೆಂದು ಮುಖ್ಯಮಂತ್ರಿಗಳ ಪರವಾಗಿ ಹೇಳುತ್ತೇನೆ, ಸತ್ಯಾಗ್ರಹವನ್ನು ಬಿಡಿ ಎಂದೂ ಹೇಳಿದೆ. ನಾನು ಏನೇನು ಕ್ರಮ ಕೈಗೊಳ್ಳುವುದಕ್ಕೆ ಸಾಧ್ಯವಿದೆ ಅದನ್ನು ಮಾಡುತ್ತೇನೆ. ಫಂಡ್ ಡೈವರ್ಟ್ ಮಾಡುವುದಕ್ಕೆ ಸಾಧ್ಯವೇ ಎಂದು ಯೋಚಿಸುತ್ತೇನೆ. ಎಷ್ಟರಮಟ್ಟಿಗೆ ಜನರಿಗೆ ಉಪಕಾರ ಮಾಡುವುದಕ್ಕೆ ಸಾಧ್ಯವಿದೆ ಅದನ್ನು ಶಕ್ತಿಮೀರಿ ಮಾಡುವುದಕ್ಕೆ ಪ್ರಯತ್ನಿಸುತ್ತೇನೆಂದು ಹೇಳುತ್ತೇನೆ.

ಶ್ರೀ ಬಿ. ಎಂ. ಇದಿನಬ್ಬ.—ಧರಣಿ ಕುಳಿತವರು ಸಮಾಧಾನವಾಗಬೇಕಾದರೆ ತಾವು.....

ಶ್ರೀ ಎಂ. ವೀರಪ್ಪ ಮೊಯಿಲಿ.—ತಮ್ಮ ಪರವಾಗಿ ಜಿಲ್ಲಾಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿ.

SRI H. D DEVE GOWDA —I will ask my Secretary, who is incharge of the Dept. to go with some senior officers tomorrow morning. ಪರ್ಸನಲ್ ಆಗಿ ನೋಡಿಕೊಂಡು ಬರಲಿ ಇಲ್ಲದೇ ಹೋದರೆ ಮೂರು ನಾಲ್ಕು ದಿನಗಳಲ್ಲಿ ಬೇರೆಯವರನ್ನು ಡೆಪ್ಯೂಟ್ ಮಾಡುವ ವ್ಯವಸ್ಥೆ ಮಾಡುತ್ತೇನೆ. I will talk to the DC also.

ಶ್ರೀ ಎಂ. ವೀರಪ್ಪ ಮೊಯಿಲಿ.—ತಾವು ಬರುವ ಬಗ್ಗೆ ಭರವಸೆ ಕೊಟ್ಟು ಕಾರ್ಯಕ್ರಮ ಪ್ರಾರಂಭಿಸುತ್ತೇವೆ ಎಂದು ಹೇಳಬೇಕು.

(ಶ್ರೀ ಉಮರಬ್ಬನವರು ಮಾತನಾಡಲಪೇಕ್ಷಿಸಿ ಎದ್ದು ನಿಂತರು)

ಅಧ್ಯಕ್ಷರು.—ಇನ್ನೂ ನಿಮಗೆ ಸಮಾಧಾನವಾಗಿಲ್ಲವೆ ? ಕುಳಿತುಕೊಳ್ಳಿ ಉಮರಬ್ಬನವರೆ. ಬೆಳಿಗ್ಗಿನಿಂದ ನಾನು ನೋಡುತ್ತಿದ್ದೇನೆ, ಆದು ಆತಿಯಾಯಿತು. ಸಂಬಂಧಪಟ್ಟವರೆಲ್ಲರೂ ಕೇಳಿದ್ದಾರೆ, ಮಂತ್ರಿಗಳು ಉತ್ತರಿಸಿದ್ದಾರೆ. ಮೊಯ್ಲಿಯವರಿಗೂ ಸಮಾಧಾನವಾಗಿದೆ, ಎಲ್ಲರಿಗೂ ಸಮಾಧಾನವಾಗಿದೆ. ನಿಮಗೆ ಸಮಾಧಾನವಾಗದಿದ್ದರೆ ಹೇಗೆ ?

ಶ್ರೀ ಬಿ. ಎ. ಉಮಾರಬ್ಬಿ.—ಒಂದು ಕ್ಲಾರಿಫಿಕೇಷನ್ ಕೇಳುವುದಕ್ಕೆ ಅವಕಾಶ ಕೊಡಿ

ಅಧ್ಯಕ್ಷರು.—ಕೇಳಿತುಕೊಳ್ಳಿ. ನೀವು ಹೇಳುವುದು ರೆಕಾರ್ಡ್ ಆಗುವುದಿಲ್ಲ

[illegible] ೩. ಅಪ್ಪರ್ ತುಂಗಾ ಯೋಜನೆಯನ್ನು ಕಾರ್ಯರೂಪಕ್ಕೆ ತರುವುದು

ಶ್ರೀ ಡಿ. ಜಿ. ಬಸವನಗೌಡ.—ತುಂಗಾ ಮೇಲ್ದಂಡೆ ಯೋಜನೆಯ ಪಂಚವಾರ್ಷಿಕ ಯೋಜನೆಯಲ್ಲಿ ಹಾಗೂ ರಾಜ್ಯದ ಆಯವ್ಯಯದಲ್ಲಿ ಸೇರಿದ್ದು ಹಾಗೂ ಕೃಷ್ಣಾನದಿ ನೀರಿನ ಹಂಚಿಕೆಯಲ್ಲಿ ಲಭಿಸಿ ನೀರು ಒದಗಿಸಿದ್ದರೂ ಈ ಯೋಜನೆಯನ್ನು ಕಾರ್ಯಗತ ಮಾಡದಿರುವ ಬಗ್ಗೆ ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳ ಗಮನ ಸೆಳೆಯುತ್ತೇನೆ.—

ಶ್ರೀ ಹೆಚ್. ಡಿ. ದೇವೇಗೌಡ (ನೀರಾವರಿ ಹಾಗೂ ಲೋಕೋಪಯೋಗಿ ಸಚಿವರು).—ಮಾನ್ಯ ಅಧ್ಯಕ್ಷರೆ ಈ ಕೆಳಕಂಡ ಹೇಳಿಕೆಯನ್ನು ಓದುತ್ತೇನೆ.—

1 The Upper Tunga Project as originally contemplated envisaged the raising of existing Tunga Anicut near Gajanur and a reservoir across Malathi River for irrigation 3.2 lakh acres in Shimoga and Honnali Taluks of Shimoga District, Hirekerur, Ranebennur, Haveri, Mundargi, Shirahatti, Shiggaon and Hanagal Taluks of Dharwar District and Koppal Taluk of Raichur District by running a left bank High Level Canal of Length 350 miles from Tunga Anicut The utilisation proposed was 40 TMC.

2 The M.I P.C. Board during May 1977 have approved two Master Plans for Krishna Basin, Viz one for an utilisation of 734 TMC for immediate implementation and the other for 1050 TMC. for ultimate utilisation which can be implemented only after the Krishna Valley Authority is established. In these Master Plans, allocations have been made for three Lift Irrigation Schemes on Tunga and Tungabhadra rivers as under.—

Sl. No.	Name of work	Allocation in 734 TMC Master Plan TMC	Allocation in 1050 TMC Master Plan TMC
1	Tunga Lift Irrigation Scheme at Gajanur	–	10
2	Tungabhadra Lift Irrigation Scheme at Bhairanpad.	–	12
3	Tungabhadra Lift Irrigation Scheme at Shingatallur	8	15
	Total	8	37

(However, as per the revised Master Plan sent to Central Water Commission vide Government letter No. PWD 1 MMM 87 dated